ಒಂದು ಸಹಸ್ರಮಂದಿ ಮುನಿಗಳಿಗೆ ಆಹಾರ ದಾನವಾಗುವುದನ್ನು ಕಣ್ಣಾರೆ ಕಂಡು ಅತ್ತಿಮಬ್ಬೆಯ ಹಿಗ್ಗಿಹೋದಳು. ಅಲ್ಲಿಂದ ತುಸುದೂರ ನಡೆದು ಅಕೃತ್ರಿಯ ಜಿನಾಲಯಕ್ಕೆ ಆಕೆ ಬಂದಾಗ ಸಹಸ್ರಾರು ರತ್ನಬಿಂಬಗಳು ತಂಪಿನ ಹಾಗೂ ಕಂಪಿನ ಕಾಂತಿ ಬೀರುತ್ತ ತೊಳಗಿದವು. ಬೆಳದಿಂಗಳನ್ನು ಎರಕಹೊಯ್ದು ತಂಗಾಳಿಯಲ್ಲಿ ಒಪ್ಪಹಾಕಿದಂತೆ ರತ್ನಬಿಂಬಗಳು ಮೋಹಕವಾಗಿದ್ದವು. ಹಸುಮಕ್ಕಳ ಬಳಗದ ನಡುವೆ ತಾನಿದ್ದಂತೆ ಅತ್ತಿಮಬ್ಬೆಗೆ ಭಾಸವಾಯಿತು. ಸಹಸ್ರಾರು ಜಿನಬಿಂಬಗಳಿಗೆ ಒಮ್ಮೆಗೇ ಕ್ಷೀರಾಭಿಷೇಕವಾಗುವುದನ್ನು ಕಂಡು ಈಕೆ ರೋಮಂಚನಗೊಂಡಳು ! ನವರತ್ನಗಳ ಬಿಂಬದಿಂದ ಹೊರಟ ಬಣ್ಣಬಣ್ಣದ ಕಾಂತಿ, ಕೋಟಿಕೋಟಿ ಕಾಮನ ಬಿಲ್ಲನ್ನು ನೆಯ್ದು ಭವ್ಯಾತ್ಮರು ಬಣ್ಣದ ತೊಟ್ಟಿಲಿನಲ್ಲಿ ತೂಗುವಂತಿತ್ತು ! ಜಿನಬಿಂಬಗಳ ಅಭಿಷೇಕ ನೋಡಿಕೊಂಡು ಅತ್ತಿಮಬ್ಬೆ ವಿದೇಹಕ್ಷೇತ್ರಕ್ಕೆ ಬಂದಳು. ಅಪರಾಜೀತೇಶ್ವರನ ಸಮವಸರಣಕ್ಕೆ ಈಕೆಯನ್ನು ದೇವನಾರಿಯರು ಸುಸ್ವಾಗತಿಸಿದರು. ! ಸಮವಸರಣದಲ್ಲಿ ಒಂದು ಕಡೆ ದೇವನರಿಯರಿ ಇಂಪಾದ ಸಂಗೀತ !ಅತ್ತಿಮಬ್ಬೆ ಇಂಥ ಸಂಗೀತವನ್ನು ಹಿಂದೆಂದೂ ಕೇಳಿರಲಿಲ್ಲ. ಮಲ್ಲಿಗೆಯ ಕಂಪೇರಿದಂತೆ ಸುರಗೀತ ಇಂಪಾಗಿತ್ತು ! ಮುಂದೆ ನಡೆದಳು. ಅಲ್ಲಿ ಖೇಚರ ಕನ್ನೆಯರ ನರ್ತನ. ಒಮ್ಮೆ ಲಾಸ್ಯ ಇನ್ನೊಮ್ಮೆ ತಾಂಡವ. ಲಾಸ್ಯವಾಡಿದಾಗ ಖೇಚರ ಕನ್ನೆಯರು ತಂಗಾಳಿಗೊಲೆವ ಮಂದಾರ ಲತೆಗಳಂತಾಡುವರು. ತಾಂಡವಕ್ಕೆ ನಿಂತಾಗ ಅವರು ಮಿಂಚಿನಂತೆ ಬಳುಕಿ ಸಿಡಿಲಿನಂತೆ ಎರಗಿ ಭಯಾನಕ ರಸವನ್ನು ತೂರುವರು ! ಇನ್ನೂ ಮುಂದೆ ಹೊರಟರೆ ಸಹಸ್ರಾರು ಜನ ಮುನಿವೃಂದ ಮುಕ್ತ್ಯಂಗನೆಯ ಪ್ರಶಾಂತ ಶಿಶುಗಳಂತೆ ರಾರಾಜಿಸಿರು ! ಸಹಸ್ರಾರು ಜನ ಆರ್ಯಿಕೆಯರು ಕರುಣೆಯ ಸಸಿಗಳಂತೆ ಕಂಗೊಳಿಸಿದರು ! ಇದೆಲ್ಲ ಪವಾಡವನ್ನು ನೋಡಲು ಲಕ್ಷಾಂತರ ಭವ್ಯವೃಂದ ನೆರೆದು ಚಂದಿನ ಅಂದಕ್ಕೆ ಪಿಳಪಿಳನೆ ಕಣ್‌ಬಿಡುವ ನಕ್ಷತ್ರ ಮಾಲೆಯಂತೆ ವಿರಾಜಿಸಿತು ! ಅನಂತರ ಅಪರಾಜಿತಸ್ವಾಮಿ ಸಹಸ್ರದಳದ ಪೊಂದಾವರೆಯ ಮೇಲೆ ಧರ್ಮದ ಮಕರಂದ ರಾಶಿಯಂತೆ ವಿರಜಮಾನನಾಗಿದ್ದನು ! ಕಮಲಕ್ಕೆ ದುಂಬಿವಿಂಡು ಮುತ್ತುವಂತೆ ಅಪರಾಜಿತಸ್ವಾಮಿ ಪಾದಾರವಿಂದಕ್ಕೆ

ಭವ್ಯವೃಂದ ಮುತ್ತಿ ಮುತ್ತಿಕ್ಕಿ ನಲಿದಾಡಿತು ! ಅತ್ತಿಮಬ್ಬೆಯೂ ಪರಮ್ಮಾತನ ಸಾನಿಧ್ಯಕ್ಕೆ ಆಗಮಿಸಿದಳು.ತೀರ್ಥೇಶನ ಪಾದಾರವಿಂದದಲ್ಲಿ ತನ್ನ ತಾಪತ್ರಯಗಳನ್ನೆಲ್ಲ ಕೊಡವಿಬಿಡುವಂತೆ ತಲೆಬಾಗಿ ನಮಿಸಿದಳು. ತಾಕಿಸಿದಾಕ್ಷಣ ರೋಮಾಚನವಾದಂತಾಯಿತು ! ದಿವ್ಯಧ್ವನಿಯ ನವನೀತದಲ್ಲಿ ಮಿಂದವಳಂತೆ ಅತ್ತಿಮಬ್ಬೆ ಪರಮನಂದವನ್ನು ಪಡೆದಳು. ಅಲ್ಲಿಂದ ಮೇಲಕ್ಕೆ ಗಾಳಿಯಂತೆ ಏರಿ ಈಕೆ ಸಿದ್ಧಶಿಲೆಗೆ ಬಂದಳು. ಸಿದ್ಧಲೋಕದಲ್ಲಿ ಎಲ್ಲಿ ನೋಡಿದರೂ ಪರಂಜ್ಯೋತಿಯ ಪುತ್ಥಳಿಗಳೇ !ಕಿರಣದಲ್ಲಿ ಕಿರಣ ಬೆರೆತಂತೆ ಸಿದ್ಧರು ಬಬ್ಬರಿಡನೊಬ್ಬರು ಹಾಲು ಸಕ್ಕರೆಯಂತೆ ಬೆರೆಯುವ ನೋಟ ! ಬೆರೆತರೂ ವ್ಯಕ್ತಿತ್ವವನ್ನು ಉಳಿಸಿಕೊಂಡು ನಲಿವ ಕೋಟಿ ಕೋಟಿ ಸಿದ್ಧಾತ್ಮರ ಬಳಗ ! ಕೆಲವರು ನಿಂತಿರುವರು ಕೆಲವರು ಕುಳಿತಿರುವರು ! ನಿಂತಿರಲಿ ಕುಳಿತಿರಲಿ ಎಲ್ಲರ ಶಿರೋಭಾಗ ಒಂದೇ ಮಟ್ಟದಲ್ಲಿದ್ದು ಸಮತಾವದದ ಪರಕಾಷ್ಠೆಯಾಗಿ ಹೋಗಿತ್ತು ! ನಿರುಪಾಧಿಕರೂ ನಿಶ್ಚಿಂತರೂ ಆದ ಸಿದ್ಧಪರಮೇಷ್ಠಿಗಳಲ್ಲಿ ಕೆಲವರ ಪಾದಕ್ಕೆ ಅತ್ತಿಮಬ್ಬೆ ಭಕ್ತಿಯಿಂದೆರಗಿದಳು. ಎರಗಿದಾಕ್ಷಣ ಸಿದ್ಧರಸದಲ್ಲಿ ಬಿದ್ದವಳಂತೆ ಮುಗ್ಧಳಾಗಿ ತಲೆಯೆತ್ತಿ ಸಿದ್ಧಲೋಕದ ತುಂಬ ಕಣ್ಣಾಡಿಸಿದಳು. ಎಲ್ಲಿ ನೋಡಿದರೂ ಬೆಳದಿಂಗಳು ಹೊಳೆಯಾಗಿ ಹರಿವಂಥ ದೃಶ್ಯ. ಬೆಳ್ದಿಂಗಳನ್ನು ಕಡೆದಾಗ ಮೇಲೆದ್ದು ಬಂದ ಕಾಂತಿಯ ನವನೀತ ಕುಪ್ಪೆಕುಪ್ಪೆಯಾಗಿ ತೇಲುತ್ತಿರುವಂತೆ ಸಿದ್ಧಪರಮೇಷ್ಠಿಗಳು ಅಲ್ಲಲ್ಲೇ ಪುರುಷರೂಪಿನಲ್ಲಿ ವಿರಾಜಮಾನವಾದ ಭವ್ಯದೃಶ್ಯ ! ಬೆಳದಿಂಗಳಿಗಿಂತ ಹೊಳಪಾಗಿ, ಬೆಳದಿಂಗಳಿಗಿಂತ ನವುರಾಗಿ ಸಿದ್ಧಾತ್ಮರು ಕಂಗೊಳಿಸುವರು. ಆತ್ಮದ ಪಾವನತೆಯ ಪರಾಕಾಷ್ಠೆಯೆಂದರೆ ಸಿದ್ಧಪರಮೇಷ್ಠಿಗಳೇ ! ಜ್ಞಾನವೇ ಜ್ಯೋತಿಯಾಗಿ. ಜ್ಯೋತಿಯೇ ಮೂರ್ತಿಯಾಗಿ, ಪ್ರಾಶಾಂತ ಪೀಠದಲ್ಲಿ ಮಹಿಮೆಯ ಅವಕುಂಠನವನ್ನು ಧರಿಸಿ ಮಂಡಿಸಿದಂತೆ ಸಿದ್ಧಾತ್ಮರು ಮಂಡಿಸಿದ್ದರು ! ಆ ಮಹಿಲೋಕದ ಮಹಿಮೆಯಲ್ಲಿ ಅತ್ತಿಮಬ್ಬೆ ಒಂದಾಗಿಹೋದಂತೆ ಪರವಶಳಾದಳು !

“ಅಕ್ಕ, ಅಕ್ಕ ,ಸೂರ್ಯ ಬಾರುದ್ದ ಮೇಲೆ ಬಂದಿರುವನು ! ಇನ್ನಾದರೂ ಏಳಕ್ಕೆ” ಎಂದು ಗುಂಡುಮಬ್ಬೆ ಮಣಿಮಂಚದ ಮೇಲೆ ಮಲಗಿದ್ದ ಅತ್ತಿಮಬ್ಬೆಯನ್ನು ಅತ್ತ ಇತ್ತ ಅಲುಗಾಡಿಸಿದಳು. ಅತ್ತಿಮಬ್ಬೆಯ ಮುಖದಲ್ಲಿ ದೈವಿಕ ಕಳೆ ತುಂಬಿತುಳುಕುತ್ತಿತ್ತು, ಭಗವದ್‌ದರ್ಶನ ಪಡೆದವಳಂತೆ

ನಿಶ್ಚಿಂತಳಾಗಿ ನಿಷ್ಕ್ರಿಯಳಾಗಿ ಆಕೆ ಮಲಗಿ ದ್ದಳು.! ಸಿದ್ಧಲೋಕದಿಂದ ಕೆಳಗಿಳಿಯಲು ಯಾರಿಗೆ ತಾನೆ ಮನಸ್ಸಾದೀತು ! ಚಂದಿರನ ಸುತ್ತ ಗೂಡುಕಟ್ಟಿದಂತೆ ಅತ್ತಿಮಬ್ಬೆಯ ಮುಖಮಂಡಲದಲ್ಲಿ ಮಂದಹಾಸ ಲಾಸ್ಯವಾಡುತ್ತಿರುವುದನ್ನು ಕಂಡು ಗುಂಡುಮಬ್ಬೆ ಆನಂದದಿಂದ ನೋಡುತ್ತ ಆಕೆಯ ಮುಂಗುರುಳನ್ನು ನೇವರಿಸಿದಳು. ಚಂದಿರನ ಮೇಲೆ ಶುಕ್ರನನ್ನು ಕೂರಿಸಿದಂತೆ ಆಕೆಯ ಮೂಗುತಿ ಮಿಂಚಿತು. ! ಹದವಾಗಿ ವೀಣೆಯನ್ನು ನುಡಿಸಿದಂತೆ ಅತ್ತಿಮಬ್ಬೆಯ ಉಸಿರಾಟ ಇಂಪಾಗಿ ಮಲ್ಲಿಗೆ ವನದಿಂದ ಬೀಸುವ ತಂಗಾಳಿಯಂತೆ ಕಂಪಾಗಿತ್ತು !

"ಅಕ್ಕ, ಎಂಥ ಗಾಢನಿದ್ರೆ ಅಕ್ಕ ! ಎಲ್ಲರ ಜಕಳವೂ ಆಯಿತಕ್ಕ" ಎನ್ನುತ್ತ ಗುಂಡುಮಬ್ಬೆ ಮತ್ತೆ ಅಲುಗಾಡಿಸಿದಳು. ಯಾವುದೋ ಲೋಕದಿಂದ ಇಳಿದುಬಂದವಳಂತೆ ಅತ್ತಿಮಬ್ಬೆ ಮೇಲೆದ್ದು ಸುತ್ತಲೂ ಕಣ್ಣಾಡಿಸಿದಳು. ನೀರಿನಿಂದ ಮೇಲೆ ತೆಗೆದ ಮೀನಿನಂತೆ ತಳಮಳಿಸಿದಳು.

"ಅಕ್ಕ, ಏನಾದರೂ ಕನಸಾಗಿತ್ತೇ ?" ಎಂದು ಗುಂಡುಮಬ್ಬೆ ಆಕೆಯ ಗಲ್ಲವನ್ನು ಹಿಡಿದು ತಿರುವಿ ಕೇಳಿದಳು.

"ಗುಂಡು, ಎಂಥ ಅನ್ಯಾಯ ಮಾಡಿಬಿಟ್ಟೆ . . . .?" ಎಂದು ಅತ್ತಿಮಬ್ಬೆ ತುಂಬ ನಷ್ಟವಾದವಳಂತೆ ನುಡಿದಳು.

"ಏನಕ್ಕ ಅನ್ಯಾಯ. ಎಲ್ಲರೂ ಎದ್ದು ಜಳಕ ಮಾಡಿ ದೇವರ ಪೂಜೆಯನ್ನೂ ಪೂರೈಸಿರುವರು. ನೀನಿನ್ನೂ ಮಲಗಿರುವೆ ! ಹೋಗಿ ಎಚ್ಚರಿಸು ಎಂದು ಅತ್ತೆ ಕಳಿಸಿ ಕೊಟ್ಟರು. ಮುಖ ತೊಳಿ ಏಳು" ಎಂದು ಗುಂಡುಮಬ್ಬೆ ಮಗುವನ್ನು ರಮಿಸುವಂತೆ ರಮಿಸಿದಳು.

"ಗುಂಡು, ನಾನು ವಿದೇಹ ಕ್ಷೇತ್ರ ನೋಡಿದೆ. ಅಪರಾಜಿತನ ಸಮವಸರಣ ಕಂಡೆ. ಜಿನ ದರ್ಶನವಾಯಿತು. ! ಸಿದ್ಧಲೋಕದ ಪರಮಾನಂದಲ್ಲಿ ಪರವಶಳಾಗಿ ಹೋಗಿದ್ದೆ ! ಎಂಥ ಮೋಹಕ ದೃಶ್ಯ ! ಎಂಥ ಮಿಂಚಿನ ಲೋಕ !" ಎಂದು ನುಡಿಯುತ್ತಿರುವಾಗ ಪದ್ಮಬ್ಬೆಯೂ ಅಲ್ಲಿಗೆ ಬಂದು "ಗುಂಡು, ಅಕ್ಕನನ್ನು ಕರೆದುಕೊಂಡು ಬಾ ಎಂದು ಕಳಿಸಿದರೆ ನೀನೂ ಇಲ್ಲೇ ಕುಳಿತುಬಿಡುವುದೇ ?" ಎಂದು ಆಕ್ಷೇಪಿಸಿದಳು. ಅಕ್ಕ ಕಂಡ ಕನಸಿನ ಚಿಂತ್ರಗಳನ್ನೆಲ್ಲ ಗುಂಡುಮಬ್ಬೆ ತನ್ನ ಅತ್ತೆಗೆ ಬಣ್ಣಿಸಿದಳು.

"ತುಂಬ ಸಂತೋಷ ತಾಯಿ. ನಮ್ಮ ಅತ್ತಿಮಬ್ಬೆಗ ಈಗ ಆರು ತಿಂಗಳು ಕಣೆ ! ಹೆರಿಗೆಯಾಗುವ ತನಕ ಇಂಥ ಕನಸುಗಳೇ ಆಗುತ್ತಿರಲಿ" ಎಂದು ಸಂತಸದಿಂದ ನುಡಿದು "ಅತ್ತಿಮಬ್ಬೆ, ಏನಾದರೂ ಬಯಕೆಯಾಗುವುದೇನಮ್ಮ ? ಏನಿದ್ದರೂ ತಿಳಿಸು ಮಗು. ನಿನ್ನ ಆಸೆ ನೆರವೇರಿಸುವೆನು" ಎಂದು ತನ್ನ ಮಗಳನ್ನು ಕೇಳುವಂತೆ ಕೇಳಿದನು.

"ಖಂಡಿತವಾಗು ನೆರವೇರಿಸುವಿರಾ ?" ಅತ್ತಿಮಬ್ಬೆ ಸಂದೇಹಗೊಂಡು ನುಡಿದಳು. "ನನ್ನ ಮೇಲೂ ಅನುಮಾನವೇ ಮಗು. ನಮ್ಮ ವಂಶದ ಕುಡಿ ನಿನ್ನ ಹೊಟ್ಟೆಯಲ್ಲಿದೆ. ! ಈಗ ನಿನಗೆ ಏನು ಬಯಕೆಯಾದರೂ ಅದೆಲ್ಲ ಆ ನ್ನನ ಮೊಮ್ಮಗನ ಬಯಕೆ ಕಣೆ ! ಹೇಳು ನನ್ನ ಚಿನ್ನ. ಏನು ಬೇಕಾದರೂ ಕೇಳಮ್ಮ !" ಎಂದು ಪದ್ಮಬ್ಬೆ ಸೊಸೆಯನ್ನು ಮುದ್ದು ಮಾಡಿದಳು.

"ಅತ್ತೆ, ನಾನೇ ಬೆಳದಿಂಗಳಲ್ಲಿ ಜಿನಬಿಂಬವನ್ನು ಮಾಡಿಸಿ ಕಣ್‌ತುಂಬ ನೋಡ ಬೇಕೆಂದು ಬಯಕೆಯಾಗಿದೆಯಲ್ಲ. !" ಎಂದು ಅತ್ತಿಮಬ್ಬೆ ನಿರಾಳವಾಗಿ ತಿಳಿಸಿದನು.

"ಅಕ್ಕ ನೀನಿನ್ನೂ ಸಿದ್ಧಲೋಕದಲ್ಲೇ ಇರುವೆ. ನಮ್ಮ ಲೋಕಕ್ಕೆ ಇಳಿದು ಬಾರಕ್ಕ ನವರತ್ನಗಳ ಬಿಂಬ ಮಾಡಿಸೋಣ !" ಎಂದು ಗುಂಡುಮಬ್ಬೆ ತಿಳಿಸಿದಳು.

"ಊಹು, ನನಗೆ ಬೆಳದಿಂಗಳ ಮೂರ್ತಿಯೇ ಆಗಬೇಕು !" ಎಂದು ಅತ್ತಿಮಬ್ಬೆ ಮುಗುಳ್ನಕ್ಕಳು.

"ಎಂಥ ಮೂರ್ತಿ ಮಾಡಿಸಬೇಕೋ ಏನೋ ಅದರ ಮಾಟವನ್ನಾದರೂ ತೋರಿಸು ತಾಯಿ?"ಎಂದು ಪದ್ಮಬ್ಬೆ ಗಂಭೀರವಾಗಿ ಕೇಳಿದಳು.

"ಅದರ ಮಾಟ ನಾನೆಲ್ಲಿ ತರಲಿ ಅತ್ತೆ ? ಕನಸಿನಲ್ಲೇನೋ ಕೋಟಿ ಕೋಟಿ ಅಂಥ ಬಿಂಬಗಳನ್ನು ಕಂಡೆ !" ಎಂದು ಅತ್ತಿಮಬ್ಬೆ ಅಂತರ್ಮುಖಿಯಾಗಿ ಕುಳಿತಳು.

"ಅತ್ತಿಮಬ್ಬೆ, ಈ ರಾತ್ರಿಯೂ ಮಲಗಿದಾಗ ಅದೇ ಕನಸು ಕಾಣುವೆಯಂತೆ. ಸಾಧ್ಯವಾದರೆ ನೀನು ಕಂಡ ಜಿನಬಂಬವನ್ನು ಮಾದರಿಗಾಗಿ ಒಂದೇ ಒಂದನ್ನು ತೆಗೆದುಕೊಂಡು ಬಾ. ಅದರಂತೆ ನೀನು ಕೇಳಿದಷ್ಟು ಬಿಂಬಗಳನ್ನು ಮಾಡಿಸಿದರಾಯಿತು.

ಏಳಮ್ಮ ಹಸಿದಿರಬಾರದು" ಎಂದು ಸೊಸೆಯನ್ನು ಎಬ್ಬಿಸಿಕೊಂಡು ಪದ್ಮಬ್ಬೆ ಹೋದಳು.

ಅತ್ತಿಮಬ್ಬೆಯ ಮೇಲೆ ಕನಸು ಅಪೂರ್ವ ಪರಿಣಾಮವನ್ನುಂಟುಮಾಡಿತು. ಆಕೆಯ ಕಲ್ಪನೆ ಕೊನರಿದಂತಾಗಿ ಆಗಾಗ ವಿದೇಹ ಕ್ಷೇತ್ರವನ್ನೂ ಪರಮೌಧಾರಿಕ ಕಾಯದ ಜಿನೇಂದ್ರನನ್ನೂ ಬಗೆಗಣ್ಣೆದಿರುತಂದುಕೊಳ್ಳಲು ಪ್ರಯತ್ನಿಸಿದಳು. ಸಿದ್ಧಲೋಕದ ಮೋಹಕತೆಯನ್ನು ಮೂರ್ತಿವತ್ತಾಗಿ ಕಲ್ಪನೆಯಲ್ಲೇ ನೇಯಲು ಪ್ರಯತ್ನಿಸಿದಳು. ರೇಖಾಚಿತ್ರವನ್ನು ಮೊದಲು ಚಿತ್ರಿಸಿಕೊಂಡು ಅನಂತರ ವರ್ಣವನ್ನು ತುಂಬಲು ಮನಸ್ಸಿನಲ್ಲೇ ಹೆಣಗಾಡಿದಳು. ಮನೆಯಲ್ಲಿದ್ದು ಬೆಳ್ಳಿಬಂಗಾರವನ್ನೆಲ್ಲ ಕರಗಿಸಿ ಜಿನ ಮೂರ್ತಿಗಳನ್ನಾದರೂ ಮಾಡಿಸಬಾರದೇಕೆ ಎಂಬ ಹಂಬಲವುಂಟಾಯಿತು. ಸಹಸ್ರ ಸಹಸ್ರ ಬಿಂಬಗಳನ್ನು ಒಂದೆಡೆ ಕೂರಿಸಿ ಅಭಿಷೇಕ ಮಾಡಿದರೆ ಎಷ್ಟು ರಮಣೀಯ ವಾಗಿರುವುದು ! ಅಕೃತ್ರಿಮ ಜಿನಾಲಯಗಳ ಮಾದರಿಯಲ್ಲೇ ತಾನೇಕೆ ಜಿನಾಲಯಗಳನ್ನು ಕಟ್ಟಿಸಬಾರದು ? ಸಹಸ್ರ ಕೂಟ ಜಿನಾಲಯವನ್ನು ಗಗನಚುಂಬಿಯಾಗಿ ನಿರ್ಮಿಸಿದರೆ ಅದರ ಮೇಲೆ ಪೌರ್ಣಿಮೆಯ ದಿನದಂದು ಹಾಲು ಸುರಿದಂತೆ ಬೆಳದಿಂಗಳು ಸುರಿದಾಗ ಎಂಥ ಸೌಂದರ್ಯವಿದು ! ಅಮಾವಾಸ್ಯೆಯ ಕಗ್ಗತ್ತಲಿನಲ್ಲಿ ಜಿನಾಲಯದ ಅಡಿಯಿಂದ ಮುಡಿತಕನ ಒಳಗೂ ಹೊರಗೂ ಲಕ್ಷ ಲಕ್ಷ ತುಪ್ಪದ ದೀಪವನ್ನು ಅಂಕುರಾರ್ಪಣಗೊಳಿಸಿದರೆ ಜ್ಯೋತಿರ್ಲೋಕವೇ ಬುವಿಗಿಳಿದು ಬಂದಂ ತಾಗುವುದಲ್ಲ ಎಂದು ಹಗಲುಗನಸು ಸೃಷ್ಟಿಸಿಕೊಂಡು ಕಲ್ಪನಾ ವಿಹಾರಿಯಾಗಿ ಅತ್ತಿಮಬ್ಬೆ ಓಲಾಡಿದಳು; ತನ್ನ ಗರ್ಭಾಂಬುಧಿಯಲ್ಲಿ ಮೊಳೆಯುತ್ತಿರುವ ಶಿಶುವನ್ನೂ ಅದೇ ದೃಶ್ಯದಲ್ಲಿ ಓಲಾಡಿಸಿದಳು !

ಕನಸು ಕಾಣುವುದು ಬೇಸರವಾದಾಗ ಅತ್ತಿಮಬ್ಬೆಯ ಕಾವ್ಯವಿಹಾರಿಯಾಗುತ್ತಿದ್ದಳು. ಪಂಪನ ಆದಿಪುರಾಣವನ್ನು ಕೈಗೆತ್ತಿಕೊಂಡು ಅದರಲ್ಲಿ ಬರುವ ಸಗ್ಗದ ಮನಮೋಹಕ ಚಿತ್ರಗಳನ್ನು ಕಂಡು ರೋಮಾಂಚನಗೊಳ್ಳುವಳು. ಸಗ್ಗವಾಗಲಿ, ಭೂಮಿಯಾಗಲಿ ದೇವರನ್ನು ನಂಬಿದರೆ, ಧರ್ಮವನ್ನು ಉಳಿಸಿಕೊಂಡು ಬಾಳಿಸಿದರೆ ಮಾತ್ರ ಉದ್ಧಾರ ಇಲ್ಲದಿದ್ದರೆ ಅಧೋಗತಿಯಾಗುವುದು ಎಂಬ ಸಿದ್ಧಾಂತದಲ್ಲಿ ಆಕೆಗೆ ಪೂರ್ಣನಂಬಿಕೆ ಹುಟ್ಟಿತು. ಸದಾ ಕಂಪಿಯಂತೆ ರೆಂಬೆಯಿಂದ ರೆಂಬೆಗೆ ಹಾರಾಡುವ ಚಿತ್ತವನ್ನು ಅರೆಚಣವೂ ಪುರುಸತ್ತು ಕೊಡದೆ ಜಿನಬಿಂಬಗಳ ಸುತ್ತ ಅಲೆಸಿದಳು. ಆಗಾಗ ಕಾವ್ಯಗಳನ್ನೂ ಸಹಸ್ರ ಸಹಸ್ರವಾಗಿ ಪ್ರತಿಮಾಡಿ ಪೇರಿಸಿದರೆ ಹೇಗೆ ಕಂಡೀತು ಎಂಬ

ಚಿತ್ರವನ್ನು ಚಿತ್ರಿಸಿಕೊಳ್ಳುವಳು. ಕೇಳಿದವರಿಗೆಲ್ಲ ಸಾಹಿತ್ಯವನ್ನೂ ಹೆಣ್ಣುಮಕ್ಕಳಿಗೆ ಕೊಡಬೇಕು, ಬಂಗಾರದ ಜಿನಬಿಂಬಗಳನ್ನು ಬಾಗಿನವಾಗಿ ಮುತ್ತೈದೆಯರಿಗೆ ಹಂಚಬೇಕು ಎಂದು ಆಶಿಸುವಳು.

"ಅತ್ತಿಮಬ್ಬೆ, ಸದಾ ಏನೋ ಯೋಚನೆಲ್ಲಿ ಮುಳುಗಿರುತ್ತೀಯಲ್ಲ. ಮೊದಲಿನಂತೆ ನಗುನಗುತ್ತ ಮಾತಾಡುತ್ತಿಲ್ಲ. ತೀರದ ಆಸೆಗಳೇನಾದರೂ ಬಚಿವಿಟ್ಟುಕೊಂಡೆಯಾದರೆ ನನ್ನ ಮೊಮ್ಮಗ ಖಿನನಾಗುವವನು ತಾಯಿ !" ಎಂದು ಪದ್ಮಬ್ಬೆ ಸೊಸೆಯನ್ನು ಎಚ್ಚರಿಸುವಳು.

"ಅತ್ತೆ, ನನ್ನ ಆಸೆಗಳನ್ನು ಹೇಳಿದರೆ ನೀವೆಲ್ಲ ನಗುವಿರಿ !" ಎಂದು ಅತ್ತಿಮಬ್ಬೆ ಸಂಕೋಚ ಪಡುವಳು.

"ನಮ್ಮ ಲೋಕದ ಮಾತಾದರೆ ಹೇಳಮ್ಮ. ಬೆಳದಿಂಗಳ ಬಿಂಬವೆಂದರೆ ಹೇಗೆ ಮಾಡಿಸಿ ಕೊಡಲಿ. ಬೆಳದಿಗಳನ್ನು ಹಿಡಿಯಲಾದೀತೆ ? ಎರಕ ಹೊಯ್ಯಲಾದೀತೆ ? ಒಮ್ಮೊಮ್ಮೆ ನಾನು ಕಣ್‌ಮುಚ್ಚಿ ಮನಸ್ಸಿನಲ್ಲೇ ಅಂಥ ಮೂರ್ತಿಮಾಡಲು ಹೋಗಿ ಕೈಲಾಗದೆ ಸುಮ್ಮನಾದೆ. ಚಿನ್ನ, ಬೆಳ್ಳಿ, ರತ್ನ ಇವುಗಳಲ್ಲಿ ಮೂರ್ತಿಮಾಡಿಸು ಎಂದು ಪದ್ಮಬ್ಬೆ ಭರವಸೆ ಕೊಟ್ಟಳು.

"ಹಾಗೇ ಮಾಡಿ ಅತ್ತೆ. ನಾನು ಕೇಳಿದಂತೆ ಮಾಡಿಸಿ ಕೊಡುವಿರಿ ತಾನೆ ?" ಅತ್ತಿಮಬ್ಬೆ ಸಂದೇಹದಿಂದಲೇ ಬೆಸಗೊಂಡಳು.

"ಬಂಗಾರದ ಬಿಂಬಮಾಡಿಸಲೇ, ಖಂಡಿತ ನಿನ್ನ ಆಶೋತ್ತರವನ್ನು ತೀರಿಸುವೆನು. ನನ್ನ ಅಸ್ತಿಯೆಲ್ಲ ಖರ್ಚಾದರೂ ಚಿಂತೆಯಿಲ್ಲ, ನನ್ನ ಮೊಮ್ಮಗನಿಗಿಂತ ಆಸ್ತಿ ದೊಡ್ಡದೆ.?"

"ಹೋಗಲಿ ಅತ್ತೆ ಒಂದು ಸಹಸ್ರ ಬಂಗಾರದ ಬಿಂಬಮಾಡಿಸಿ ಕೊಡಿ. ಅಷ್ಟೇ ರತ್ನದ ಬಿಂಬಗಳನ್ನೂ ಮಾಡಿಸಿಬಿಡಿ. ಎಲ್ಲಕ್ಕೂ ಒಮ್ಮೆಗೇ ಅಭಿಷೇಕವಾಗಬೇಕು" ಎಂದು ಅತ್ತಿಮಬ್ಬೆ ನುಡಿಯುತ್ತಿದ್ದಂತೆ ಪದ್ಮಬ್ಬೆಯ ಜಂಘಾಬಲವೆ ಉಡುಗಿತು !

"ನಿನಗೆ ಏನಾಗಿದೆ ಮಗು, ಮಾತ್ತೆತ್ತಿದರೆ ಸಾವಿರ ಬಿಂಬ ಎನ್ನುವೆ, ಸಾವಿರ ದೇವಾಲಯ ಎನ್ನುವೆ. ?ಇವು ಬಿಟ್ಟು ಇನ್ನೇನಾದರೂ ಇದೆಯೇ ಮಗು ?"

“ಇನ್ನು ಇದೆಯತ್ತೆ. ಲಕ್ಷಾಂತರ ಶ್ಲೋಕರಾಶಿಯ ದವಳ ಜಯದವಳ ಸಹಸ್ರ ಪ್ರತಿಯಾಗಬೇಕು. ಪಂಪ, ಪೊನ್ನ, ಇವರೆಲ್ಲ ಸಹಸ್ರಮುಖಿಗಳಾಗಿ ನಮ್ಮ ನಾಡನ್ನು ಬೆಳಗಬೇಕು !” ಎಂದು ಅತ್ತಿಮಬ್ಬೆ ಭಾವಾವೇಶದಿಂದ ತಿಳಿಸಿದಳು.

“ಅಕ್ಕ ನಿನ್ನ ಆಸೆಯನ್ನೆಲ್ಲ ತೀರಿಸುವೆನು. ನೀನು ನೊಂದರೆ ನಾನಿದ್ದೂ ಸಾರ್ಥಕವೇ?” ಎಂದು ಗುಂಡುಮಬ್ಬೆ ಮಾತುಕೊಟ್ಟಳು.

“ಗುಂಡು, ನಿನ್ನ ತಲೆಯೂ ಕೆಟ್ಟಿದೆಯಮ್ಮ ! ಅತ್ತಿ ಮಾತೆತ್ತಿದರೆ ಸಾವಿರ. ನೀನು ಹಿಂದೂ ಮುಂದೂ ಯೋಚಿಸದೆ ನಡೆಸಿಕೊಡುವುದಾಗಿ ಮಾತುಕೊಡುತ್ತಿರುವೆ. ಅಪದ್ಧಕ್ಕೆ ಏನಪ್ಪಣೆ ಎಂದರೆ ಬಾಯಿಗೆ ಬಂದದ್ದೇ. ನೀವಿಬ್ಬರೂ ಕಲೆತು ಆಗಸಕ್ಕೆ ಏಣಿಹಾಕಲು ಯೋಜನೆ ಹಾಕಿರುವಿರಿ !” ಎಂದು ಪದ್ಮಬ್ಬೆ ಆಕ್ಷೇಪಿಸಿದಳು.

“ಅತ್ತೆ, ಈ ಲೋಕದ ಮಾತಾದರೆ ನಡೆಸಿಕೊಡುವುದಾಗಿ ತಾನೇ ಮಾತುಕೊಟ್ಟರಿ”ಎಂದು ಅತ್ತಿಮಬ್ಬೆ ನೆನಪುಮಾಡಿಕೊಟ್ಟಳು.

“ನೀನು ಈ ಲೋಕದ ಕನ್ನೆಯಲ್ಲ. ದೇವಲೋಕದವಳಾಗಿರಬೇಕು. ಅಲ್ಲಿ ಕಲ್ಪವೃಕ್ಷ, ಕಾಮಧೇನು, ಚಿಂತಾಮಣಿಗಳು ಇರುವುದಾಗಿ ಹೇಳುವರು. ಏನು ಕೇಳಿದರೂ ತಪ್ಪದೆ ಕೊಡುತ್ತವೆಯಂತೆ”ಎಂದು ಪದ್ಮಬ್ಬೆ ಸೋಜಿಗಗೊಂಡಳು.

“ನಮ್ಮಕ್ಕನ ಆಶೋತ್ತರ ತೀರಿಸುವುದಕ್ಕೆ ಸ್ವರ್ಗವೇ ಆಗಬೇಕೆ ? ತಾವು ಯೋಚಿಸ ಬೇಕಾಗಿಲ್ಲ. ಸಹಸ್ರ ಬಿಂಬಕ್ಕೆ ಒಮ್ಮೆಗೇ ಕ್ಷೀರಾಭಿಷೇಕವಾಗುವ ಮಹಾದೃಶ್ಯವನ್ನು ನಾನು ನೋಡಿಸುವೆನು !” ಎಂದು ಗುಂಡುಮಬ್ಬೆ ಶಪಥಮಾಡಿದಳು.

ಗುಂಡುಮಬ್ಬೆ ತನ್ನಕ್ಕನ ಕಲ್ಪನಾವಿಲಾಸಕ್ಕೆ ಬಣ್ಣವಿಕ್ಕುವ ಕಲಾವತಿ ! ಅತ್ತಿಮಬ್ಬೆಯ ಭಾವಾವೇಶಕ್ಕೆ ಬೆಡಗುಮಾಡಬಲ್ಲ ಮಾಟಗಾತಿ ! ಇವರಿಬ್ಬರೂ ಗಂಡಭೇರುಂಡದ ಮುಖದ್ವಯವಿದ್ದಂತೆ ! ಅತ್ತಿಮಬ್ಬೆಯ ಬಯಕೆಗಳೆಲ್ಲ ಬೇರೆಯವರಿಗೆ ಹುಚ್ಚುಕಲ್ಪನೆಗಳಾಗಿ ಕಂಡರೂ ಗುಂಡುಮಬ್ಬೆಗೆ ಮಾತ್ರ ಭಕ್ತಿಯ ಆಗರವಾಗಿ ಸಹೃದಯತೆಯ ನೆಲೆವನೆಯಾಗಿ ಕಂಡುದರಲ್ಲಿ ಆಶ್ಚರ್ಯವೇನಿಲ್ಲ. ಅತ್ತಿಮಬ್ಬೆಯ ಸಂತಸವೇ ಈಕೆಯ ಸಂತಸ. ಆಕೆಯ ಕೊರಗೇ ಈಕೆಯ

ಕೊರಗು, ಅಕ್ಕನ ಬಾಳ್ವೆಯಲ್ಲಿ ತನ್ನ ಬಾಳ್ವೆಯನ್ನು ನೈವೇದ್ಯವಾಗರ್ಪಿಸಿ ತನ್ನತನವನ್ನು ಹಿಂಗಿಸಿಕೊಂಡು ಗುಂಡುಮಬ್ಬೆ ಹಾಯಗಿದ್ದಳು. ತನಗಾಗಿ ಇವಳಿಗೆ ಏನೂ ಬೇಡ ; ಅಕ್ಕನಿಗಾಗಿ ಎಲ್ಲವೂ ಬೇಕು.

ಗುಂಡುಮಬ್ಬೆ ಅಭಿನವ ಸಿದ್ಧಲೋಕವನ್ನು ನಿರ್ಮಿಸಬೇಕೆಂದು ಸಂಕಲ್ಪ ಮಾಡಿದಳು. ಇದಕ್ಕಾಗಿ ತನ್ನ ಅಣ್ಣಂದಿರನ್ನೆಲ್ಲ ತನ್ನ ಮನೆಗೆ ಕರೆಸಿಕೊಂಡಳು. ತನ್ನ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಒಂದೆರೆಡು ವಾರ ಹೆಣಗಾಡಿದಳು. ಕೊನೆಗೆ ಅತ್ತಿಮಬ್ಬೆಯ ಕನಸಿನ ಲೋಕವನ್ನು ವಾಸ್ತವಿಕ ಲೋಕಕ್ಕಿಳಿಸಿ ಒಂದು ಮಧ್ಯಾಹ್ನ ಅತ್ತಿಮಬ್ಬೆಯನ್ನು ಸಿದ್ಧಲೋಕಾವಲೋಕನಕ್ಕೆ ಆಹ್ವಾನಿಸಿದಳು. ಕನ್ನಡಿಯಲೇ ಒಂದು ಕೋಣೆಯ ನಿರ್ಮಾಣವಾಗಿತ್ತು. ನಾಲ್ಕು ದಿಕ್ಕಿಗೂ ಕಲಾಪೂರ್ಣವಾಗಿ ಕನ್ನಡಿಗಳನ್ನು ಜೋಡಿಸಿ ಎಲ್ಲಕಡೆಗೂ ರತ್ನ ಬಿಂಬಗಳನ್ನು ಕೂರಿಸಿದ್ದರು. ಬಿಂಬದ ಶಿರೋಭಾಗದಲ್ಲಿ ನಳಿಕೆ ಹೊರಟು ಬೇಕೆಂದಾಗ ತನಗೆತಾನೇ ಬಿಂಬಗಳಿಗೆ ಅಭಿಷೇಕವಾಗುವಂತೆ ಯೋಜನೆ ಹಾಕಿತ್ತು ! ಅತ್ತಿಮಬ್ಬೆಯನ್ನು ಕನ್ನಡಿಯ ಪ್ರಪಂಚದ ನಟ್ಟನಡುವೆ ಕೂರಿಸಿದರು. ಎತ್ತತಿರುಗಿದರೂ ಕನ್ನಡಿಯ ಮಾಯಾಲೋಕದಲ್ಲಿ ಕೋಟಿಕೋಟಿ ಯಾಗಿ ಜಿನಬಿಂಬಗಳು ತೊಳಗಿದವು ! ದಿಟ್ಟಿ ಹರಿದಷ್ಟೋ ಮಾಯಾಲೋಕ ಮಹಿಮಾ ಪೂರ್ಣವಾಗಿತ್ತು ! ರತ್ನಬಿಂಬಗಳು ಸೂಸುವ ಕಾಂತಿಪುಂಜ ಕನ್ನಡಿಲೋಕಕ್ಕೆ ತಾಕಿದಾ ಕ್ಷಣ ಒಂದಕ್ಕೆ ಹತ್ತಾಗಿ, ಹತ್ತಕ್ಕೆ ನೂರಾಗಿ ನೂರಕ್ಕೆ ಸಹಸ್ರವಾಗಿ ವೃದ್ಧಿಯಾಗುತ್ತ ಹೋಯಿತು ! ಜಿನಬಿಂಬಗಳೂ ಇದೇ ರೀತಿ ನೋಡಿದಷ್ಟೋ ಹೆಚ್ಚಿದವು. ಅತ್ತಿಮಬ್ಬೆಯ ಕಲ್ಪನೆಗೆ ಗರಿಮೂಡಿಸುವ ಚಿತ್ರ ಇಲ್ಲಿತ್ತು. ! ಆಕೆಯ ಭಾವಕ್ಕೆ ಪುಲಕವಿಡುವ ದೃಶ್ಯ ! ಅತ್ತಿಮಬ್ಬೆ ಮೈಯೆಲ್ಲಾ ಕಣ್ಣಾಗಿ ಅವಲೋಕಿಸಿದಳು. ಮೈಯೆಲ್ಲ ಮನಸಾಗಿ ಆನಂದಿಸಿದಳು. ಮೈಯೆಲ್ಲ ಸುಖಶಕ್ತಿಯಾಗಿ ಭಕ್ತಿಗಿ ಚಕ್ಕಲಗುಲಿಟ್ಟಂತಾಗಿ ತನ್ಮಯಳಾಗಿ ಹೋದಳು. ! ನಳಿಕೆಗಳಲ್ಲಿ ರತ್ನ ಬಿಂಬಗಳ ಮೇಲೆ ಶುದ್ಧಜಲ ಇಳಿದಾಗ ನಿರುಪಾಧಿಕ ಸುಖವೇ ಮಳೆಯಾಗಿ ಸುರಿದು ಹೊಳೆಯಾಗಿ ಹರಿವಂತೆ ಭಾಸವಯಿತು. ! ಕೋಟಿ ಕೋಟಿ ಬಿಂಬಗಳ ಮೇಲೆ ಏಕಕಾಲದಲ್ಲಿ ದೇವಗಂಗೆ ಹರಿದಂತೆ ಮೋಹಕವಾಯಿತು ! ನಳಿಕೆಯಿಂದ ಕ್ಷೀರವಿಳಿದಾಗ ಪಾಲ್ಗಡಲೇ ಜನ್ಮಾಭಿಷೇಕವೆಸಗಲು ನಮ್ರವಾಗಿ ನವುರಾಗಿ ಕೋಟಿಮುಖಿಯಾಗಿ ಇಳಿದು ಬಂದಂತೆ ಭವ್ಯವಾಗಿತ್ತು

! ಬೆಳದಿಂಗಳು ತಿಳಿದಿಂಗಳಾಗಿ ಜಿನಾಭೀಷೆಕಕ್ಕೆ ಕಿರಣ ಕಿರನವನ್ನು ತೆಕ್ಕೆಹಾಕಿಕೊಂಡು ಬರುತ್ತಿರುವಂತೆ ರಮಣೀಯವಾಗಿತ್ತು. !ಇಳಿದಾಗ ಹಾಲಾದರೂ ಮೂರ್ತಿಯನ್ನು ಸೋಕಿ ದಾಕ್ಷಣ ಆಯಾ ರತ್ನದ ಕಾಂತಿಯನ್ನು ಪಡೆದು ವರ್ಣವಿನ್ಯಾಸದಿಂದ ನರ್ತಿಸುತ್ತ ಬಣ್ಣಬಣ್ಣದ ಪಿಂತಾಂಬರವನ್ನುಟ್ಟು ಬುವಿಗಿಳಿದು ಬಂದ ದೇವಕನ್ನಿಕಾ ವೃಂದದಂತೆ ಅದ್ಭುತವಾಗಿತ್ತು. ಜಿನಬಿಂಬಗಳೆ ಪುಳಕಗೊಂಡು ಲೋಕಕಲ್ಯಾಣಕ್ಕಾಗಿ ಹೊರಟಂತೆ, ಅಹಿಂಸಾಧರ್ಮವೇ ಅಲೆಅಲೆಯಾಗಿ ಒಲೆದು ಬಂದಂತೆ ಕ್ಷೀರವಾರಿಧಿ ನರ್ತನ ವಾಡಿತು ! ಹೆರೆದುಪ್ಪದ ಮಳಲು ಬಿಂಬಗಳ ಮೇಲೆ ನುಗ್ಗಿದಾಗ ಚಿಂತಾಮಣಿಗಳೇ ಬಿಂಬಗಳ ಮೇಲೆ ಮೊಗೆದು ಬಂದಂತಾಗಿ ಅತ್ತಿಮಬ್ಬೆ ಚಕಿತಳಾದಳು. ಆಕೆಯ ರಸಾವೇಶಕ್ಕೆ ಭಕ್ತಿಯ ಪರಿವೇಶ ಕಟ್ಟಿದಂತಾಯಿತು ! ಗಂಧಾಭಿಷೇಕವಾದಾಗ ತ್ರಿಲೋಕವೂ ಕಂಪಿನ ಕಡಲಲ್ಲಿ ಬಿದ್ದಂತಾಯಿತು ! ಅತ್ತಿಮಬ್ಬೆಗೆ ಒಡಲೆಲ್ಲ ಸುಗಂಧವಾದಂತಾಗಿ ಕಣ್ಣಿಗೆ ಹಬ್ಬವಾಯಿತು ! ನಾಸಿಕ ನಾಕವನ್ನುಂಡಂತಾಯಿತು ! ಅಭಿಷೇಕ ಮುಗಿದ ಮೇಲೆ ರತ್ನಬಿಂಬಗಳ ಹಿಂಬದಿಯಲ್ಲಿ ತುಪ್ಪದ ಸೊಡರು ಮೊಳಕೆಗೊಂಡವು. ಆಗ ನೋಡಬೇಕು ರತ್ನಬಿಂಬಗಳ ಬಿನ್ನಾಣವನ್ನು. ರತ್ನಕಾಂತಿಗೆ ಪುಳಕಮೂಡಿದಂ ತಾಯಿತು ! ಕನಸಿಗಿಂತ ಕೋಟಿಪಾಲು ಹಿರಿದಾಗಿ ಈ ಮಾಯಾಲೋಕ ಅತ್ತಿಮಬ್ಬೆಯ ಬಯಕೆಯನ್ನು ತೀರಿಸಿತು. ಗುಂಡುಮಬ್ಬೆಯನ್ನು ಬಾಚಿ ತಬ್ಬಿಕೊಂಡು "ಗುಂಡು, ನೀನಿಲ್ಲದಂದು ಲೋಕವೇ ನನಗೆ ಶೂನ್ಯವಮ್ಮ ! ನನ್ನ ನಾಲಗೆ ನೀನು ! ನನ್ನ ಕಣ್ಣು ನೀನು ! ನನ್ನ ಕಿವಿ ನೀನು ! ನನಗಾಗಿ ಸರ್ವಸ್ವವನ್ನೂ ತ್ಯಾಗಮಾಡಿದ ತ್ಯಾಗಮಯಿನೀನು ! ನನ್ನ ಕನಸಿಗೆ ಕಂಪು ಮೂಡಿಸಿದ ಕನ್ನೆ ನೀನು !ನನ್ನ ಮನಸ್ಸಿಗೆ ಮಹಿಮೆಯನ್ನು ಲೇಪಿಸಿದ ಮನದನ್ನೇ ನೀನು !ನನ್ನ ಭಾವಕ್ಕೆ ಭಾಷೆ ತೊಡಿಸಿದ ಬೆಡಗುಗಾರ್ತಿ ನೀನು" ಎಂದು ತಂಗಿಯನ್ನು ಕೊಂಡಾಡಿದಳು.

ಅತ್ತಿಮಬ್ಬೆಯ ಹೆಬ್ಬಯಕೆಯನ್ನು ಕೇಳಿ ಅಜಿತಸೇನಾಚಾರ್ಯರು ಹಿಗ್ಗಿದರು. ಕಲಿಕಾಲದ ಜಿನೇಂದ್ರ ಜನನಿಯೆಂದು ಅತ್ತಿಮಬ್ಬೆಯನ್ನು ಆಚಾರ್ಯರು ಮನಸ್ಸಿನಲ್ಲೇ ಕೊಂಡಾಡಿದರು. ರನ್ನನ ಕೈಲಿ ಆಶ್ರಮದಲ್ಲಿದ್ದ ಎಲ್ಲಾ ಗ್ರಂಥಗಳ ಒಂದೊಂದು ಪ್ರತಿಯನ್ನು ವಿಜಯಪುರಕ್ಕೆ ಕಳುಹಿಸಿಕೊಟ್ಟರು. ಹತ್ತಾರು ಗಾಡಿಗಳಲ್ಲಿ ಓಲೆಗ್ರಂಥಗಳನ್ನು ರನ್ನ ಹೇರಿಕೊಂಡು ಬಂದನು. ಅವನನ್ನು ಅಚ್ಚುಕಟ್ಟಾಗಿ ಜೋಡಿಸಿ ಪುಸ್ತಕ ಭಂಡಾರವನ್ನು ವಿಜಯಪುರದಲ್ಲಿ ತೆರೆದರು. ಅದರ

ಉದ್ಘಾಟನಾಮಹೋತ್ಸವವನ್ನು ಅತ್ತಿಮಬ್ಬೆಯೇ ನೆರವೇರಿಸಿದಳು. ಸಹಸ್ರಾರು ಓಲೆಪ್ರತಿಯನ್ನು ನೋಡಿ ಅತ್ತಿಮಬ್ಬೆ ಹಿಗ್ಗಿ ಹೋದಳು !

"ರನ್ನ, ನಾಡಿನ ಓಲೆಭಾಗ್ಯವೆಂದರೆ ಈ ಗ್ರಂಥರಾಶಿಯೆ !"ಎಂದು ಅತ್ತಿಮಬ್ಬೆ ಓಲೆಭಾಗ್ಯಕ್ಕೆ ಕಲಾಪೂರ್ಣವಾದ ವ್ಯಾಖ್ಯಾನ ಮಾಡಿದಳು.

"ಅಮ್ಮಾಜಿ, ನಮ್ಮ ನಾಡಿನ ಶಾರದಾಮಾತೆ ತಾವು. ತಮ್ಮಂತೆ ಮಹತ್ವಾಕಾಂಕ್ಷೆಯುಳ್ಳವರು ಯುಗಕ್ಕೆ ಒಬ್ಬರಿದ್ದರೂ ಸಾಕು. ಕನ್ನಡನಾಡು ಉದ್ಧಾರವಾಗದಿರದು ! ಕನ್ನಡಭಾಷೆ ಮುತ್ತೈದೆಯಾಗಿ ಬಾಳಬೇಕಾದರೆ ಅತ್ತಿಮಬ್ಬೆಯರ ಅವತಾರದಿಂದಲೇ ಸಾಧ್ಯ !"ಎಂದು ರನ್ನ ಆವೇಶದಿಂದ ನುಡಿದನು.

"ಕೇವಲ ಅತ್ತಿಮಬ್ಬೆಯರು ಅವತರಿಸಿದರೆ ಸಾಲದು, ನಿನ್ನಂಥ ತರುಣರು ಕನ್ನಡ ಪ್ರೇಮವನ್ನು ಬೆಳೆಸಿಕೊಂಡು ಕವಿಚಕ್ರವರ್ತಿಯಾಗುವ ಕನಸುಕಾಣಬೇಕು. ನಾವೆಲ್ಲ ಕಸಬಳಿಯುವ ಜನ ! ಕವಿಯ ರಸಪ್ರವಾಹಕ್ಕೆ ಕಲ್ಮಶ ಬೆರೆಯದಿರಲೆಂದು ನಾವೆಲ್ಲ ಕಸ ತೆಗೆದು ವಾತಾವರಣವನ್ನು ಶುಚಿಯಾಗಿಡಬೇಕು. ಕವಿಚಕ್ರವರ್ತಿಗಳು ಸಹಸ್ರ ಸಹಸ್ರವಾಗಿ ನಮ್ಮ ನಾಡಿನಲ್ಲಿ ಅವತರಿಸಬೇಕು. ಗುಂಡುಮಬ್ಬೆ ನನಗಿದ್ದ ಜಿನಬಿಂಬಗಳ ಮೋಹವನ್ನು ತೀರಿಸಿದಳು. ನೀನು ಕವಿಚಕ್ರವರ್ತಿಯಾಗಿ ಕಾವ್ಯರತ್ನಗಳನ್ನು ಸೃಷ್ಟಿಸಬೇಕು. ಅವನ್ನು ಸಹಸ್ರ ಪ್ರತಿಮಾಡಿಸಿ ನಾನು ಹಂಚುವೆನು"ಎಂದು ಅತ್ತಿಮಬ್ಬೆ ತನ್ನ ಕನಸಿನ ಇನ್ನೊಂದು ಮುಖವನ್ನು ರನ್ನನ ಮುಂದಿಟ್ಟಳು.

"ಅಮ್ಮಾಜಿ, ನಿಮ್ಮನ್ನು ಏನೆಂದು ಕರೆಯಬೇಕೋ ನನಗರ್ಥವಾಗುತ್ತಿಲ್ಲ ಮಾತೆತ್ತಿದರೆ ಸಹಸ್ರವೆನ್ನುವಿರಿ. ತಾವು ಸಹಸ್ರಮುಖಿಯಾದ ಶಾರದೆ ! ತಾವು ಸಹಸ್ರ ಲೋಚನೆಯಾದ ವೀಣಾಪಾಣಿ ! ತಾವು ಸಹಸ್ರ ಕರೆಯಾದ ಸರಸ್ವತಿ !"

"ರನ್ನ, ನಿನ್ನ ಪ್ರತಿಭೆಯನ್ನೆಲ್ಲ ನನ್ನ ಬಣ್ಣನೆಗೇ ಕಳೆದುಬಿಡಬೇಡ. ನೆನಪಿರಲಿ ಪಂಪಾನಾದ ಮೇಲೆ ಪೊನ್ನ, ಪೊನ್ನನಾದ ರನ್ನ !" ಎಂದು ಅತ್ತಿಮಬ್ಬೆ ತನ್ನ ಸಾಕುಮಗನನ್ನು ಪ್ರಚೋದಿಸಿದಳು.

* * * *

“ಅತ್ತಿ, ನನ್ನಿಂದ ಏನಾಗಬೇಕಮ್ಮ, ಬಯಕೆಯಿದ್ದರೆ ಹೇಳಕ್ಕ” ಎಂದು ಅಬ್ಬಕಬ್ಬೆ ಗರ್ಭಿಣಿಯನ್ನು ನಂಬಿಸಿದಳು.

“ಅಮ್ಮಾಜಿ, ಬಯಕೆಗಳೇನಂತೆ ಒಂದಲ್ಲ ನೂರಾರಿವೆ. ನಾನು ಹೇಳಿದರೆ ನೀವೆಲ್ಲ ನಗುವಿರಿ. ಹುಚ್ಚಿ ಎನ್ನುವರಿ” ಎಂದು ಅತ್ತಿಮಬ್ಬೆ ಸಂಕೋಚಗೊಂಡಳು. ಈಕೆಯ ಶ್ರೀಮಂತಕ್ಕೆ ಚಾಮುಂಡರಾಯನ ತಾಯಿ ಕಾಳಲಾದೇವಿಯೂ ಆಗಮಿಸಿದ್ದಳು.

“ಅತ್ತಿಮಬ್ಬೆ, ಸಂಕೋಚ ಬೇಡಮ್ಮ. ನಾವೆಲ್ಲ ಇರುವಾಗ ನಿನ್ನ ಬಯಕೆ ತೀರಿಸಲಾರೆವೆ ?”ಎಂದು ಕಾಳಲಾದೇವಿ ಭರವಸೆಯಿತ್ತಳು.

“ಅತ್ತೆ, ಎಲ್ಲರೂ ನನ್ನನ್ನು ಹುಚ್ಚಿಯೆಂದು ಪರಿಗಣಿಸಿರುವರು. ನಮ್ಮ ಗುಂಡು ಬಬ್ಬಳು ನನ್ನ ಅಂತರಂಗವನ್ನು ಅರಿತಿರುವಳು ನೋಡಿ” ಎಂದು ಅತ್ತಿಮಬ್ಬೆ ನುಡಿದಳು.

“ಏನು ಬೇಕೊ ಹೇಳು ಮಗು. ನಾನು ರಾಯರ ತಾಯಿ ! ನ್ನಿನ ಬಯಕೆ ಬೆಟ್ಟದಷ್ಟು ಹಿರಿದಾದರೂ ತೀರಿಸುವೆನು.”

“ಅತ್ತೆ, ಗಬ್ಬಾದ ಸಹಸ್ರ ಹಸುಗಳನ್ನು ಸಹಸ್ರಮಂದಿ ಬಡ ಬಸುರಿಯರಿಗೆ ಕೊಡಬೇಕೆಂದು ಬಯಕೆಯಾಗುತ್ತಿದೆ.” ಎಂದು ಅತ್ತಿಮಬ್ಬೆ ನುಡಿಯುತ್ತಿದ್ದಂತೆ ಅಬ್ಬಕಬ್ಬೆ ನಡುವೆ ಬಾಯಿಹಾಕಿ.

“ನೀವೇ ನೋಡಿ ತಾಯಿ, ಮನುಷ್ಯ ಮಾತ್ರದವರಿಗೆ ಇವಳ ಬಯಕೆಯನ್ನು ತೀರಿಸಲಾದೀತೆ ?” ಎಂದು ನಕ್ಕಳು.

“ಅಬ್ಬಕಬ್ಬೆ, ನೀವೆಲ್ಲ ಸಾಧಾರಣ ಚೇತನಗಳು. ತೀರಿಸಲು ಸಾಧ್ಯವಿಲ್ಲದಿದ್ದರೂ ಇಂಥ ಹೆಬ್ಬಯಕೆಯನ್ನು ಕೇಳಿ ಆನಂದಿಸಲು ಪುಣ್ಯಬೇಕು. ಇಂಥ ಬೃಹದಾಕಾರದ ಭಾವನೆಗಳು ಅಂತಿಂಥವರ ಮನಸ್ಸಿನಲ್ಲಿ ಖಂಡಿತ ಹುಟ್ಟಲಾರವ”ು” ಎಂದು ಸೋಜಿಗ ಗೊಂಡು,

“ಅತ್ತಿಮಬ್ಬೆ, ನಿನ್ನ ಆಸೆಯನ್ನು ನಾನು ತೀರಿಸಲು. ಗಬ್ಬಾದ ಸಹಸ್ರ ಗೋಸಂಕುಲವನ್ನು ನಿನ್ನ ಹೆಸರಿನಲ್ಲಿ ಹಂಚುವೆನು” ಎಂದು ಧಾರಾಳವಾಗಿ ಮಾತು ಕೊಟ್ಟಳು.

"ಅಬ್ಬಕಬ್ಬೆ, ಸಾವಿರ ಜನ ಬಸುರಿಯರನ್ನು ಕರೆಸುವ ಭಾರ ನಿನ್ನದು. ಇವಾದರೂ ಆಗುತ್ತೋ ಇಲ್ಲವೋ ? ನನ್ನ ಬಂಗಾರದ ಆಶೋತ್ತರಗಳನ್ನು ಅರ್ಥಮಾಡಿಕೊಳ್ಳಲಾರದೆ ಬಸುರಿಯನ್ನು ಬಡವು ಮಾಡುತ್ತಿರುವಿರಿ ! ಎಂದು ಕಾಳಲಾದೇವಿ ಎಲ್ಲರನ್ನೂ ಸೇರಿಸಿ ಆಕ್ಷೇಪಣೆ ಮಾಡಿದಳು.

ವಿಜಯಪುರದಲ್ಲಿ ಗುಡಿಸಲಲ್ಲಿ ವಾಸಮಾಡುತ್ತಿದ್ದ ಬಡವರಿಗೆಲ್ಲ ಕಾಳಲಾದೇವಿ ಔತಣ ಮಾಡಿಸಿದಳು. ಬಡ ಹೆಣ್ಣು ಮಕ್ಕಳಲ್ಲಿ ಗರ್ಭವತಿಯಾದರವರನ್ನು ಪತ್ತೆ ಹಚ್ಚಿ ಸಾವಿರ ಮಂದಿಯನ್ನು ಸಾಲಾಗಿ ಕೂರಿಸಿದರು. ಗಬ್ಬಾದ ಗೋಸಂಕುಲವನ್ನು ಸಾಲಾಗಿ ಕಟ್ಟಿದರು. ನಂದಗೋಕುಲವೇ ಅಲ್ಲಿ ನೆರೆದಂತಿತ್ತು. ದಾರಿದ್ರ್ಯ ದಲ್ಲಿ ಕೊಳೆಯುತ್ತಿದ್ದ ಆ ಹೆಮ್ಮಕ್ಕಳಿಗೆ ಅಭ್ಯಂಜನ ಮಾಡಿಸಿ ನೂತನ ವಸ್ತ್ರಗಳನ್ನಿತ್ತು ಕೈಲಾದಷ್ಟೋ ಸಿಂಗರಿಸಿದರು. ಎಂದೂ ಹೂ ಕಾಣದೆ ಕಂತಬೊಂತೆಯಾದ ಅವರ ತಲೆಗೆ ಎಣ್ಣೆಯಿಟ್ಟು ಬಾಚಿ ಹೂ ಮುಡಿಸಿದರು. ಅವರು ಬಡತನಕ್ಕೆ ನಡುಮುರಿದಂತಾಯಿತು. ! ಬಡಮುತ್ತೈದೆ ಯರೆಲ್ಲ ಭಾಗ್ಯಲಕ್ಷ್ಮಿಯರಾಗಿ ಕಂಗೊಳಿಸಿದರು !ಅತ್ತಿಮಬ್ಬೆ ಈಮುತ್ತೈದೆಯರ ಸಾಲಿನಲ್ಲಿ ಮಂದಗತಿಯಲ್ಲಿ ಸಾಗಿ ಒಬ್ಬೊಬ್ಬರನ್ನಾಗಿ ಮಾತಾಡಿಸಿ ಕಷ್ಟಸುಖವನ್ನು ವಿಚಾರಿಸಿದಳು. ಒಬ್ಬೊಬ್ಬರನ್ನೂ ಕರೆದು ಬೆಳ್ಳಿಯ ಮೂಗುದಾರ, ಬೆಳ್ಳಿಯ ಕಣ್ಣೆ, ಬೆಳ್ಳಿಯ ಹಗ್ಗ, ಬೆಳ್ಳಿಯ ಕೊಂಬುಗೊಳಸಗಳಿಂದ ಸಿಂಗರಗೊಂಡ ಒಂದೊಂದು ತುಂಬುಗಬ್ಬದ ಹಸುವನ್ನು ದಾನವಾಗಿ ಕೊಟ್ಟಳು. ! ಬಯಕೆ ಅತ್ತಿಮಬ್ಬೆಯದು, ತೀರ್ವೆ ಕಾಳಲಾದೇವಿಯದು !

ಇದಾಗಿ ಒಂದೆರಡು ದಿನ ಕಳೆದ ಮೇಲೆ ಅಜಿತಸೇನಾಚಾರ್ಯರು ನೂರಾರು ಮುನಿದೆರಗಿ ಜಂಗಮ ಜಿನೇಂದ್ರರನ್ನು ಕಣ್ತುಂಬ ನೋಡಿ ಆನಂದದ ಗುರುಬಾರಕ್ಕೆ ಜೋತವಳಂತೆ ಆಯಾಸಗೊಂಡು ಕುಳಿತಳು.

"ಅಮ್ಮಾಜಿ, ನಿಮ್ಮ ಹೆಬ್ಬಯಕೆಗಳನ್ನೆಲ್ಲ ರನ್ನ ನನ್ನೊಡನೆ ವಿವರಿಸಿದನು. ಇಂಥ ಪುಣ್ಯ ಚೇತನವನ್ನು ನೋಡಬೇಕೆನಿಸಿತು. ನಾನೇ ಹೊರಟು ಬಂದೆ. ಈ ಬೈರಾಗಿಯಿಂದ ಏನಾದರೂ ಆಗಬೇಕಾದುದ್ದರೆ ನಿಸ್ಸಂಕೋಚವಾಗಿ ಕೇಳಿಕೊ" ಎಂದು ಅಜಿತಸೇನಾಚಾರರ್ಯು ಮನಬಿಚ್ಚಿ ಮಾತಾಡಿದರು.

“ಸ್ವಾಮಿ, ಸಹಸ್ರಮಂದಿ ಜಿನಮುನಿಗಳಿಗೆ ಆಹಾರ ದಾನ ಕೊಡಬೇಕೆಂದು ಬಯಕೆ ಯಾಗುತ್ತಿದೆಯಲ್ಲ !” ಎಂದು ಅತ್ತಿಮಬ್ಬೆ ನುಡಿದಾಗ ಅಲ್ಲಿದ್ದವರೆಲ್ಲ ಅಚ್ಚರಿಗೊಂಡರು.

“ಅತ್ತಿಮಬ್ಬೆ, ನೀನು ಬುವಿಗಿಳಿದು ಬಂದ ಮೋಕ್ಷಲಕ್ಷ್ಮಿ ! ಸಹಸ್ರ ಲೋಚನೆ, ಸಹಸ್ರಮುಖಿ, ಸಹಸ್ರ ಕರೆ, ಕರ್ಣೆ, ಸಹಸ್ರ ಜಿಹ್ವೆ !” ಎಂದು ಅಜಿತ ಸೇನಾಚಾರ್ಯರು ಆಕೆಯನ್ನು ಕೊಂಡಾಡಿದರು. ಎಲ್ಲೆಲ್ಲೋ ಇದ್ದ ಜಿನಮುನಿಗಳೆಲ್ಲ ಅಜಿತಸೇನಾಚಾರ್ಯರ ದರ್ಶನಾಕಾಂಕ್ಷಿಗಳಾಗಿ ವಿಜಯಪುರಿಗೆ ಆಗಮಿಸಿದರು. ಅತ್ತಿಮಬ್ಬೆಯ ಹೆಬ್ಬಯಕೆ ಚಿಗಗಿಂಡದಂತೆ ಸಹಸ್ರ ಮಂದಿಗೂ ಮಿಗಿಲಾಗಿ ಜಿನಮುನಿಗಳು ಕಲೆತರು. ಒಂದೇ ಚಪ್ಪರದಲ್ಲಿ ಅವರೆಲ್ಲರಿಗೂ ಶಾಸ್ತ್ರೋಕ್ತವಾಗಿ ಒಮ್ಮೆಗೇ ಆಹಾರ ದಾನವಾಯಿತು. ಸಿದ್ದಲೋಕ ಸಾಕಾರಗೊಂಡು ಬುವಿಗಿಳಿದಂಥ ಅದ್ಭುತ ದೃಶ್ಯ ! ಅತ್ತಿಮಬ್ಬೆಯ ಬಯಕೆ ಹಿಂಗಿತು. ಕಣ್ಣಾರೆ ಸಹಸ್ರ ಮಂದಿ ಮುನಿ ಸಂಕುಲದ ಆಹಾರ ದಾನ ಮಹೋತ್ಸವದಲ್ಲಿ ಈಕೆ ಪಾಲ್ಗೊಂಡು ಗಾಳಿಗೆ ಗರಿ ಮೂಡಿದಂತೆ ಅಡ್ಡಾಡಿ ದಳು ! ಎಲ್ಲೆಲ್ಲೂ ತಾನೇ ಆಗಿ. ಮುನಿವೃಂದಕ್ಕೆ ಆಹಾರ ದಾನ ಕೊಡುವ ಭವ್ಯಾವಳಿಯಲ್ಲಿ ಬೆರೆತು ತಾನೂ ಕೈಲಾದಷ್ಟು ಸೇವೆಯೆಸಗಿ ಧನ್ಯಳಾದಳು!

“ಅತ್ತಿಮಬ್ಬೆ, ನಿನ್ನ ಅಶೋತ್ತರಗಳೆಲ್ಲ ನೆರವೇರುವುವು. ಇನ್ನೊಬ್ಬರ ಹಂಗಿಲ್ಲದೇ ನೀನೇ ಸಹಸ್ರ ಜಿನಾಲಯಗಳನ್ನು ಕಟ್ಟಿಸುವೆ. ನೀನೇ ಸಹಸ್ರ ಜಿನಮೂರ್ತಿಗಳನ್ನು ಪ್ರತಿಷ್ಠೆ ಮಾಡಿಸುವೆ. ಸಹಸ್ರ ಸಹಸ್ರವಾಗಿ ನೀನೇ ಗಂಥ ಬರೆಸಿ ದಾನವಿತ್ತು ನಲಿವಕಾಲ ಬಂದೇ ಬರುವುದು. ನೀನು ಕನ್ನಡ ನಾಡಿನ ಕಲ್ಪತರು !” ಎಂದು ಅಜಿತ ಸೇನಾಚಾರ್ಯರು ಆಕೆಯನ್ನು ಕೊಂಡಾಡಿ ಬಂಕಾಪುರಕ್ಕೆ ತೆರಳಿದರು. ರಸಾಭಿವ್ಯಕ್ತಿಗೆ ನೆರವಾಗಿ ಅಲಂಕಾರಾದಿಗಳು ವಿರಮಿಸುವಂತೆ ಮುನಿವೃಂದವೂ ಚದುರಿತು.

*　　*　　*　　*

“ಓಹೋ ತುಂಬ ಅಪರೂಪ ! ನಮ್ಮ ಅದೃಷ್ಟ ದೇವಕನ್ನೆಯರು ಬರುತ್ತಿರುವರು. ಭಕ್ತನ ಮೇಲೆ ಕೃಪಾದೃಷ್ಟಿ ಬಿದ್ದಂತಿದೆ !” ಎಂದು ನಾಗದೇವ ತನ್ನ ಪ್ರೇಯಸಿ ಮಹಡಿಯೇರಿ ಬರುತ್ತಿರುವುದನ್ನು ಕಂಡು ಪ್ರೇಮಲಾಪವೆಸಗಿದನು.

“ದೇವರಾಜರನ್ನು ಕಾಣಬೇಕಾಗಿದೆ. ಅದಕ್ಕಾಗಿ ಬಂದೆ” ಎಂದು ಅತ್ತಿಮಬ್ಬೆ ಚೆಕ್ಕಂದವಾಗಿ ನುಡಿದಳು.

“ ಔದಾರ್ಯದ ಕಲ್ಪತರು ಬರಬೇಕು. ತಾವೇನೋ ಲೋಕದ ಬಡತನವನ್ನು ಮೂಲೋತ್ಪಾಟನಗೊಳಿಸುವ ಕಾರ್ಯದಲ್ಲಿ ಮುಳುಗಿವಿರಿ ! ಆದರೆ ಎಲ್ಲರ ಬಡತನ ಹಿಂಗಿಸುವ ಅವಾಂತರದಲ್ಲಿ ತಾವು ನನ್ನನು ಮಾತ್ರ ಮರೆತು ಬಿಟ್ಟಿರಿ ! ನಾನು ಈಚೆಗೆ ಬಡವಾಗಿ ಹೋಗಿರುವನು ! ” ಎಂದು ನಾಗದೇವ ಪರಿಹಾಸ್ಯವೆಸಗಿದನು.

“ದೀಪದ ಕೆಳಗೆ ಕತ್ತಲೆ ತಾನೆ ?” ಎಂದು ಆಕೆ ಚಾಳಿಸಿದಳು.

“ತಮಗೆ ದೇವರಾಜರ ದರ್ಶನವಾಗಬೇಕೆ ?”

“ಆಗಬೇಕಿತ್ತು.”

“ನಾವು ಎಂದಿನಿಂದ ದೇವರಾಜರೋ !”

“ನಾನು ದೇವಕನ್ನಿಕೆ ಆದಂದಿನಿಂದ ತಾವೂ ದೇವೇಂದ್ರರಾದಿಲ್ಲ !”

“ಓಹೋ ಹಾಗೋ. ತಾವು ದೇವಕನ್ನಿಕೆಯಾದರೆ ನಾವು ದೇವರಾಜರು ! ತಾವು ಕಾಮಧೇನುವಾಗ ನಮ್ಮ ಗತಿಯೇನೋ !”

“ಅದು ತಮಗೆ ಗೊತ್ತಿರಬೇಕಲ್ಲ !”

“ತಾವು ಕಾಮಧೇನು ನಾವು ಕಾಮ ವೃಷಭ ಅಲ್ಲವೆ ?”

“ಯಾವಾಗಲು ಉಪಮೆಯನ್ನು ಬಹೂದೂರ ಎಳೆಯಬಾರದು ನನ್ನರಸ.”

“ಹೋಗಲಿ ಬಾ ದೇವಿ. ನೀನು ಉಪಮಾತೀತ ಕನ್ನೆ !”

“ಎಂಥ ಕನ್ನೆಯಾದರೂ ತಮ್ಮ ಮನದನ್ನೆ ಅಲ್ಲವೇ ?”

“ರಾಣಿ, ನನ್ನಿಂದ ಏನಾದರೂ ಸೇವೆಯಾಗಬೇಕಾಗಿತ್ತೆ ?”

“ಈಗಾಗಿರುವ ಸೇವೆಗೆ ಏನು ಕೊಟ್ಟರೂ ತೀರದಲ್ಲ !”

“ನನ್ನಿಂದ ನಿನಗೆ ಅದಾವೆ ಸೇವೆ ಆಯಿತು ?”

“ಏನೂ ಆಗಿಲ್ಲವೆ ನನ್ನ ರಾಜ ?”

“ನನಗೆ ತಿಳಿದಂತೆ ಏನೂ ಆಗಿಲ್ಲ ; ಗುಂಡುಮಬ್ಬೆ ನಿನಗಾಗಿ ಸಿದ್ಧಲೋಕವನ್ನು ಬುಮಿಗಿಸಿದಳು. ಅದನ್ನು ಕಂಡು ನಾನು ಬೆರಗಾಗಿ ಹೋದೆನು ! ಕಾಳಲಾದೇವಿಯರು ಬಂದು ನಿನಗಾಗಿ ಲಕ್ಷಾಂತರ ಹೊನ್ನನ್ನು ನೀರಿನಂತೆ ಹರಿಸಿದರು ! ನಮ್ಮ ಹುಡುಗ ಆ ರನ್ನ ಸಾರಸ್ವತ ಲೋಕವನ್ನೇ ನಿರ್ಮಿಸಿ ನಿಮ್ಮ ಮುನಿವೃಂದ ಆಗಮಿಸಿತು ! ನಮ್ಮ ಪಾಲಿಗೆ ಯಾವ ಸೇವೆಯೂ ಉಳಿದಂತಿಲ್ಲ”ಎಂದು ನಾಗದೇವ ನಗೆಯಾಡಿದನು.

“ತಾವು ಹೇಳಿದ ಎಲ್ಲ ಸೇವೆಗಳೂ ತಮ್ಮ ಸೇವೆಯನ್ನು ಕೊಂಡಾಡುವ ಸಲುವಾಗಿ ಮಾಡಿದ ಮಹಾತ್ಕಾರ್ಯಗಳಷ್ಟೇ !”

“ಅತ್ತಿ. ಈಚೆಗೆ ನಿನ್ನ ಮಾತೆಲ್ಲ ಒಗಟಾಗಿರುವುದು. ಒರಟರ ಮಲ್ಲ ನಿನ್ನ ಒಗಟನ್ನು ಬಿಡಿಸಲಾರ. ಕೃಪೆ ಮಾಡಿ ನೇರವಾದ ಮಾತುಗಳಲ್ಲಿ ವಿವರಿಸಬಾರದೆ. ?” ಎಂದು ನಾಗದೇವ ನುಡಿಯುತ್ತಿರುವಾಗ ಗುಂಡುಮಬ್ಬೆ ತಾನೂ ಬಂದು ಇವರೊಡನೆ ಬೆರೆತಳು.

“ಗುಂಡು, ನಾನೇನೋ ನಿಮ್ಮಕ್ಕನಿಗೆ ಅದ್ಭುತವಾದ ಸೇವೆ ಮಾಡಿರುವೆನಂತೆ” ನಿನಗಾದರೂ ತಿಳಿದಿದ್ದರೆ ಬಿಡಿಸಿ ಹೇಳು” ಎಂದು ಬೆಸಗೊಂಡನು.

“ಏನಕ್ಕ ಇದೆಲ್ಲ ?”

“ನನಗಾಗಿ ಇವರು ಸೇವೆ ಮಾಡಲಿ ಎಂದರು. ಈಗಾಗಲೇ ತಮ್ಮ ಸೇವೆ ಸೊಗಸಾಗಿ ಆಗಿದೆಯಲ್ಲ ಎಂದು ನಾನು ಹೇಳಿದೆ ಅಷ್ಟೇ!”

“ಹೋಗಲಿ ಇನ್ನೇನಾದರೂ ಬಯಕೆಯಿದೆಯೆ ?” ಎಂದು ಅತ್ತಿಮಬ್ಬೆಯನ್ನು ಕೇಳಿದಳು.

“ಅಯುಧಶಾಲೆ ನೋಡೋಣ ಎನಿಸುವುದು. ತೋರಿಸುವಿರಿ ತಾನೆ ?”

"ಅದಕ್ಕೇನಂತೆ ಹೋಗೋಣ ನಡಿ" ಎಂದು ಮೂವರೂ ಮಡಿಯಿಂದಿಳಿದರು. ಆಯುಧಶಾಲೆಗೆ ಬಂದರು. ಸಹಸ್ರಾರು ಕತ್ತಿಗಳನ್ನು ಮುಸೆದು ಹರಿತಗೊಳಿಸಿದರು. ಒಂದೊಂದು ಕೋರೈಸುವುದು. ಅತ್ತಿಮಬ್ಬೆ ಒಂದು ಕತ್ತಿಯನ್ನು ತೆಗೆದುಕೊಂಡು ಅಲುಗಿನ ಮೇಲೆ ಬೆರಳಾಡಿಸಿ ಹರಿತವನ್ನು ಅಳೆದಳು. ಅದನ್ನು ಜಣಬೆಯಂತೆ ಬಾಗಿಸಿ ಹದವನ್ನು ಪರೀಕ್ಷಿಸಿದಳು. ಚಣಕಾಲ ಗುಂಡುಮಬ್ಬೆಯೂ ನಾಗದೇವನೂ ಕತ್ತಿವರಸೆ ತೋರಿಸಿದರು. ಮಿಂಚಿನಂತೆ ಬಳುಕುವ, ಮಿಂಚಿನಂತೆ ಕೋರೈಸುವ ಕತ್ತಿಗಳನ್ನು ನಾನಾವರಸೆಯಲ್ಲಿ ಬೀಸಿದರು. ಮೃತ್ಯುದೇವತೆ ನಾಲಗೆಯಾಡಿಸುವಂತೆ ಕಾಣುತ್ತಿತ್ತು. ಅಲ್ಲಿದ್ದ ಈಟಿಗಳನ್ನು ತೆಗೆದುಕೊಂಡು ಅದರಾಟವನ್ನೂ ಆಡಿದರು. ಅತ್ತಿಮಬ್ಬೆ ಪರೀಕ್ಷಕಳಂತೆ ಈಕ್ಷಿಸಿದಳು. ಗದೆಯನ್ನು ತೆಗೆದುಕೊಂಡು ಗುಂಡುಮಬ್ಬೆ ಮತ್ತುನಾಗದೇವ ಕ್ಷಣಕಾಲ ಭೀಮದುರ್ಯೋಧನರ ಗದಾಯುದ್ಧವನ್ನು ಅನುಕರಿಸಿದರು. ಅಲ್ಲಿದ್ದ ಬಿಲ್ಲಿಗೆ ಕೈ ಹಾಕಿ ಹೆದೆಯೇರಿಸಿ ಜೇವೊಡೆದಾಗ ಸಿಡಿಲ ವೀಣೆ ಜೇವೊಡೆದಂ ತಾಯಿತು ! ಆಯುಧಶಾಲೆಯಲ್ಲಿ ಹೊಸಹೊಸ ಆಯುಧಗಳನ್ನೆಲ್ಲ ಈಕ್ಷಿಸಿ ಅತ್ತಿಮಬ್ಬೆ ಸಂತೃಪ್ತಳಾಗಿ ಹೋದಳು.

"ಅತ್ತಿ, ನೀನು ಕೇವಲ ಮೃದುಸ್ವಭಾವದ ಭಾವುಕಿ ಎಂದು ತಿಳಿದಿದ್ದೆ. ನನ್ನ ಎಣಿಕೆ ಸುಳ್ಳಾಯಿತು. ಸಾಹಸ ಮನೋಭಾವ ನಂದದಂತೆ ಇನ್ನೂ ಇದೆಯಲ್ಲ ! ಅದೇ ಸಂತೋಷ. ಅಲಂಕಾರ ಪುಟ್ಟಶಾಮಿಯಾಗುವ ಕವಿಯನ್ನು ಹೆರುವೆಯೋ ಏನೋ ಎಂದು ನಾನು ಚಿಂತೆಗೊಳಗಾಗಿದ್ದೆ" ಎಂದು ನಾಗದೇವ ಆತಂಕಗೊಂಡವನಂತೆ ನಟಿಸಿದನು.

"ಕವಿ ನನ್ನ ಹೊಟ್ಟೆಯಲ್ಲಿ ಹುಟ್ಟುವುದಾದರೆ ನನಗಿಂತ ಪುಣ್ಯವಂತೆ ಉಂಟೆ !" ಎಂದು ಅತ್ತಿಮಬ್ಬೆ ಹಿಗ್ಗಿ ನುಡಿದಳು.

"ನೀನು ಹೆರುವ ಕೂಸು ನನ್ನಂತೆ ಮಹಾರಥನಾಗಬೇಕು !" ನಾಗದೇವ ತನ್ನ ಅಭಿಲಾಷೆಯನ್ನು ತಿಳಿಸಿದನು.

"ಹಾಗೂ ಆಗಲಿ ನನ್ನರಸ ! ನಮ್ಮ ಚಿಣ್ಣ ಕಲಿಯೂ ಆಗಲಿ ಕವಿಯೂ ಆಗಲಿ" ಎಂದು ಅತ್ತಿಮಬ್ಬೆ ಸಮಾರೋಪ ಮಾಡಿದಳು.

“ಕವಿಗಳಲ್ಲಿ ಪರಾಕ್ರಮವೇ ? ಎರಡೂ ಒಂದುಕಡೆ ಸೇರುವುದು ಕಷ್ಟ” ಎಂದು ನಾಗದೇವ ಅನುಮಾನ ವ್ಯಕ್ತಪಡಿಸಿದನು.

“ಏಕೆ ಹೀಗೆ ಮಾತಾಡುತ್ತಿರುವಿರಿ ? ಪಂಪಮಾವ ಕಡುಗಲಿಯೂ ಆಹುದು ವಿಶ್ವಕವಿಯೂ ಅಹುದು. ಕವಿ ಎಂದಾಕ್ಷಣ ಪುಸ್ತಕವನ್ನೇ ಬರೆಯಬೇಕೆ ? ಹಿಂದಿನ ಕವಿಗಳು ಬರೆದುದನ್ನು ಅಕ್ಕರೆಯಿಂದ ಓದಿ ರಸಾಸ್ವಾದ ಮಾಡುವ ತಮ್ಮಂಥವರನ್ನೂ ಕವಿಗಳೆಂದು ಕರೆಯಬಾರದೇಕೆ ? ನಮ್ಮ ಅಕ್ಕ ಕಾವ್ಯಗಳನ್ನು ಸಹಸ್ರ ಸಹಸ್ರವಾಗಿ ಪ್ರತಿಮಾಡಿಸುವ ಕನಸು ಕಾಣುವಳು. ಈಕೆಗಿಂತೆ ಕವಿ ಬೇಕೆ ? ಕವಿಗಳೆಲ್ಲ ಮಹಾಸೌಧವಾದರೆ ಪುಸ್ತಕ ಪ್ರಕಾಶಕರೆಲ್ಲ ಮಹಾಸೌಧದ ಅಸ್ತಿವಾರವಿದ್ದಂತೆ. ಸಹೃದಯ ಸಮೂಹವೆಲ್ಲ ಮಹಾಸೌಧದ ಕಲಶವಿದ್ದಂತೆ. ತಾವೂ ಹಾಗೂ ಅಕ್ಕ ಇಬ್ಬರೂ ಕವಿಗಳಿಗೆ ಆಶ್ರಯಧಾತರಾಗಿರುವಿರಿ ! ಜೊತೆಗೆ ಸಹೃದಯ ಕಾವ್ಯರಾಶಿಯನ್ನು ಉಪಾಸನೆ ಮಾಡುತ್ತಿರುವಿರಿ !ಕವಿ. ಪ್ರಕಾಶಕ ಹಾಗು ಸಹೃದಯ ಇವರು ಸಾಹಿತ್ಯಲೋಕದ ರತ್ನತ್ರಯ ! ರಸಪ್ರವಾಹದ ತ್ರಿವೇಣೀಸಂಗಮ !” ಎಂದು ಗುಂಡುಮಬ್ಬೆ ರಸಾವೇಶದಿಂದ ಕವಿಯನ್ನೂ ಕಲಿಯನ್ನೂ ಪೃಥಕ್ಕರಿಸಿ ಬಣ್ಣಿಸಿದಳು.

“ಹಾಗಿದ್ದರೆ ಇನ್ನು ನಾನೂ ಮಹಾಕವಿಯೆಂದು ಹೇಳಿಕೊಳ್ಳಬಹುದಲ್ಲ ”ಎಂದು ನಾಗದೇವ ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಂಡನು.

“ಧಾರಾಳವಾಗಿ ಹೇಳಿಕೊಳ್ಳಬಹುದು !”ಎಂದು ಗುಂಡುಮಬ್ಬೆ ನಗುತ್ತಾ ತಿಳಿಸಿದಳು.

“ನಾನು ರಾಣಿವಾಸದ ಮಹಾಕವಿ !” ಎಂದು ನಾಗದೇವ ತಾನೂ ನಕ್ಕನು.

“ಹೌದು ನನ್ನರಸ. ಗುಂಡು ಇದಾಳಲ್ಲ ನನಗಿಂತ ಬುದ್ಧಿವಂತೆ” ಎಂದು ಅತ್ತಿಮಬ್ಬೆ ಮೆಚ್ಚಿಕೊಂಡಳು.

“ಅಕ್ಕ ,ನೀನು ಚಂದ್ರನಾದರೆ ನಾನು ಸಾಗರ !” ಗುಂಡುಮಬ್ಬೆ ತಿಳಿಸಿದಳು.

“ಅಕ್ಕ ನೀವು ನೀವೇ ಸೇರಿಕೊಂಡು ನನಗೆ ಕೈಕೊಟ್ಟೀರ !” ನಾಗದೇವ ಗಾಬರಿ ಗೊಂಡಂತೆ ನಟಿಸಿದನು.

“ತಮಗೆ ಕೈಕೊಟ್ಟು ಎಷ್ಟೋ ವರ್ಷವಾಯಿತಲ್ಲ. !”ಎಂದು ಗುಂಡುಮಬ್ಬೆ ಪಕ್ಕನೆ ನಕ್ಕಳು.

“ಅಲ್ಲ ಅತ್ತಿಮಬ್ಬೆ ಚಂದ್ರ, ನೀನು ಸಾಗರ !ನಾನು ?”

“ತಾವೋ ಸಾಗರದಲ್ಲಿದ್ದಾಗ ತರಂಗ. ಚಂದ್ರನಲ್ಲಿದ್ದಾಗ ಬೆಳದಿಂಗಳು” ಎಂದು ಗುಂಡುಮಬ್ಬೆ ನಸುನಕ್ಕಳು.

“ಗುಂಡು ನಿನ್ನ ಹೋಲಿಕೆ ಸಂದರ್ಭೋಚಿತವಾಗಿಲ್ಲ.”

“ಒಳ್ಳೆ ಉಪಮೆಯಿದ್ದರೆ ಹೇಳಬಹುದಲ್ಲ ಮಹಾಕವಿ !”

“ನಾನು ಖಂಡಿತ ಧನ್ಯನಾದೆ. ನೀವಿಬ್ಬರೂ ನನ್ನನ್ನು ಮಹಾಕವಿಯೆಂದು ಒಪ್ಪಿಕೊಂಡಿರುವಿರಿ. ಅತ್ತ ಮಹಾರಾಜರು ನನ್ನನ್ನು ಕಡುಗಲಿಯೆಂದು ಸಾರಿರುವರು !”ಎಂದು ನಾಗದೇವ ತಲೆದೂಗೆ ಆನಂದವನ್ನು ಸಮತೋಲನಗೊಳಿಸುವಂತೆ ಓಲಾಡಿದನು.

“ತಮ್ಮ ಉಪಮೆ ಬರಲೇ ಇಲ್ಲವಲ್ಲ” ಅತ್ತಿಮಬ್ಬೆ ಕೆಣಕಿದಳು.

“ಹೌದು ಮರೆತಿದ್ದೆ. ಅತ್ತಿ ನೀನು ಚಂದ್ರ. ನಾನು ಲಾಂದ್ರ ! ನಮ್ಮ ಗುಂಡು ಮಹಾಸಾಗರ, ನಾನು ಮೇಲೋಗರ !” ಎಂದು ನಾಗದೇವ ಚಪ್ಪಾಳೆ ತಟ್ಟಿ ನಕ್ಕನು. ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಅಳ್ಳೆ ಬಿರಿಯುವಂತೆ ನಕ್ಕರು !

* * * *

ವಿಜಯಪುರದಲ್ಲಿ ಸಂಭ್ರಮವೋ ಸಂಭ್ರಮ ! ಊರಿನ ಎಲ್ಲ ಬಾಣಂತಿಯರೂ ಮಗುವನ್ನು ಹೆಗಲ ಮೇಲೆ ಹಾಕಿಕೊಂಡು ದಲ್ಲಪನು ಮನೆಯ ಆವರಣಕ್ಕೆ ಬಂದರು. ಸಹಸ್ರಾರು ಜನ ಕೂರುವಂತೆ ಅಲ್ಲಿ ಹಸಿವಾಣಿ ಚಪ್ಪರ ಹಾಕಿದ್ದರು. ಬಂದ ಬಾಣಂತಿಯರನ್ನೆಲ್ಲ ಸಾಲಾಗಿ ಕೂರಿಸಿದರು. ಚಪ್ಪರದ ನಟ್ಟನಡುವೆ ಬೆಳ್ಳಿಯ ಹಗ್ಗಕ್ಕೆ ಬಂಗಾರದ ತೊಟ್ಟಿಲು ಹಾಕಿ ಅದರಲ್ಲಿ ಮಕಮಲ್ಲನ್ನು ಹಾಸಿ ಅತ್ತಿಮಬ್ಬೆಯ ಗಂಡು ಕೂಸನ್ನು ಮಲಗಿಸಿದ್ದರು. ಈ ದಿನ ಅದರ ನಾಮಕರಣ ಮಹೋತ್ಸವ. ಈ ಮಗು ಹುಟ್ಟುತ್ತಿದ್ದಂತೆ ತನ್ನ ಓರಿಗೆಯ ಮಕ್ಕಳನ್ನೆಲ್ಲ ಬಳಿಗೆ ಕರೆದುಕೊಂಡಿರುವನಲ್ಲ!

ಬಂದ ಬಾಣಂತಿಯರಿಗೆಲ್ಲ ರಸದೌತಣ !ಅನಂತರ ಒಂದೊಂದು ಮಗುವಿಗೂ ಬೆತ್ತದ ತೊಟ್ಟಿಲು. ಬಂಗಾರದ ಒಳ್ಳೆ, ಬೆಳ್ಳಿಯ ಬಟ್ಟಲು. ಚಿನ್ನದ ಚಮಚ, ಮಕ ಮಲ್ಲಿನ ಹಾಸು ಹೊದಿಕೆ

ಇದನ್ನು ದಾನವಾಗಿ ಕೊಟ್ಟರು. ಬಬ್ಬೊಬ್ಬ ಬಾಣಂತಿಯೂ ಮಗುವಿನೊಡನೆ ಬಂದು ಅತ್ತಿಮಬ್ಬೆಯ ಹಾಗೂ ಆಕೆಯ ಕೂಸಿನ ದರ್ಶನ ಪಡೆದು ಹೋಗುವಾಗ ಬಬ್ಬೊಬ ಬಾಂಣತಿಗೂ ಹಾಸಲು ಹೊದೆಯಲು ರತ್ನಗಂಬಳಿಗಳನ್ನು ಹಂಚಿ ಒಂದೊಂದು ಹಿಡಿ ಹೊನ್ನಿತ್ತು ಕಳಿಸಿದರು. ಬಂದ ಬಾಣಂತಿಯರೆಲ್ಲ ಹಸುಗೂಸನ್ನೂ ಅತ್ತಿಮಬ್ಬೆಯನ್ನೂ ಮನಸಾರೆ ಕೊಂಡಾಡಿ ಹೋದರು. "ಅಮ್ಮಾಜಿ ತಮಗೆ ನೂರು ಮಕ್ಕಳಾಗಲಿ. ಹುಟ್ಟಿದ ಮಕ್ಕಳೆಲ್ಲ ತಮ್ಮಂತೆ ಉದಾರಿಗಳಾಗಿ ನೂರುಕಾಲ ಬಾಳಿಲಿ" ಎಂದು ಹಾರೈಸಿದರು. ಅತ್ತಿಮಬ್ಬೆ ಬಬ್ಬೊಬ್ಬರೊಡನೆಯೂ ಮನಬಿಚ್ಚಿ ಮಾತಾಡಿ "ಮಗು ಜೋಪಾನ. ನಿನ್ನ ಆರೋಗ್ಯವನ್ನು ಸರಿಯಾಗಿ ಕಾಪಾಡಿಕೋ. ಏನಾದರೂ ಕಷ್ಟವಿದ್ದರೆ ಯಾವಾಗ ಬೇಕಾದರೂ ಬಂದು ಹೇಳು. ಅನ್ನ ವಿಲ್ಲದಿದ್ದರೆ ತಿಳಿಸು. ಉಪವಾಸವಿದ್ದೀಯೆ ! ಹಾಲುತುಪ್ಪ ಮುಖ್ಯ. ನಿನಗಾಗಿ ನಮ್ಮ ಮನೆ ಬಾಗಿಲು ಸದಾ ತೆರೆದಿದೆ" ಎಂದು ಮನಕರಗುವಂತೆ ನುಡಿದು ಬೀಳ್ಕೊಡುತ್ತಿದ್ದಳು. "ಬಡವರಿಗೆ ಕೊಡುವುದಂತಿರಲಿ, ಅವರ ಸಂಕಟದಲ್ಲಿ ಸಹಾಭೂತಿ ತೋರುವರು ಯಾರಿದ್ದಾರೆ ? ಮಾತಾಯಿ ಬಸುಯಾದದಂದಿನಿಂದ ಊರಿನ ದಾರಿ ದ್ರ್ಯಕ್ಕೇ ಏಟು ಬಿತ್ತಲ್ಲ, ಇಂಥ ನನ್ನ ತಾಯಿಯ ಮಗ ರಾಜನಾದರೆ ನಮಗೆಲ್ಲ ರಾಗಿ ದ್ರ್ಯಕ್ಕೇ ಏಟು ಬಿತ್ತಲ್ಲ, ಇಂಥ ನನ್ನ ತಾಯಿಯ ಮಗ ರಾಜನಾದರೆ ನಮಗೆಲ್ಲ ರಾಗಿ ಬೀಸುವುದು ತಪ್ಪೀತೋ ಏನೊ !" ಎಂದು ಬಬ್ಬಾಕೆ ಕನಸು ಕಟ್ಟಿದಳು.

"ಅತ್ತಿಮಬ್ಬೆ ತಪಸ್ವಿನಿಯಂತೆ ! ದ್ರೌಪದಿಯ ಅಕ್ಷಯಪಾತ್ರೆ ಆಕೆಗೆ ಸಿಕ್ಕಿದೆಯಂತೆ.ಇಲ್ಲದಿದ್ದರೆ ಇಷ್ಟೊಂದು ಜನಕ್ಕೆ ದೋಚಲು ಹೇಗೆ ಸಾಧ್ಯ ? ಏನಾದರೂ ಆಗಲಿ ಬಡವರಿಗೆ ಬೇಕಾದುದು ಹೊಟ್ಟೆ ತುಂಬ ಅನ್ನ ಮೈತುಂಬ ಬಟ್ಟೆ.ನಮಗೆ ಅಷ್ಟುಕೊಟ್ಟು ಅಕ್ಷಯಪಾತ್ರೆ ಅವರೇ ಇಟ್ಟುಕೊಳ್ಳಲಿ. ಸಿಂಹಾಸನ ಅವರಿಗೇ ಇರಲಿ, ಛತ್ರಿ ಚಾಮರ ಎಲ್ಲ ಅವರೇ ಇರಿಸಿಕೊಳ್ಳಲಿ. ನಮಗೆ ಬೇಕಾದ ಅನ್ನಬಟ್ಟೆ ಎರಡು ಕೊಡಲಿ !" ಎಂದು ಇನ್ನೊಬ್ಬಾಕೆ ತನ್ನ ಹಕ್ಕನ್ನು ಒತ್ತಿ ಹೇಳಿದಳು.

"ದಿನವೂ ಅತ್ತಿಮಬ್ಬೆ ದೇವರ ಪೂಜೆ ಮಾಡುವಳಂತೆ. ದೇವರ ಮುಂದೆ ಕುಳಿತು ಬಡವರ ಕಷ್ಟಪರಿಹಾರವಗಾಲಿ ಎಂದು ಮೊರೆಯಿಡುತ್ತಾಳಂತೆ. ಕೂಡಲೆ ಪಾರಿಜಾತವನ್ನು ಬುಡವಿಡಿದು

ಅಲುಗಾಡಿಸಿದಾಗ ಹೂ ಉದುರುವಂತೆ ಈಕೆಯ ಮುಂದೆ ಬಂಗಾರದ ಆಲಿಕಲ್ಲ ಮಳೆ ರಪ ರಪ ಉದುರುವುದಂತೆ" ಎಂದು ಇನ್ನೊಬ್ಬಳು ತಾನು ಕೇಳಿದ ಕಥೆಯನ್ನು ಬಿತ್ತರಿಸಿದಳು.

"ನಿನಗಾರಮ್ಮ ಈ ಕಥೆ ಹೇಳಿದವರು ?" ಕುತೂಹಲದಿಂದ ಬಬ್ಬಳು ಬೆಸಗೊಂಡಳು.

"ನಮ್ಮ ಮನೆಯ ಪಕ್ಕದವಳು ಅವರ ಮನೆಗೆ ಕೆಲಸಕ್ಕೆ ಹೋಗುವಳು. ಮೊನ್ನೆ ಅವಳೇ ಹೇಳಿದಳು. ಒಮ್ಮೊಮ್ಮೆ ಅತ್ತಿಮಬ್ಬೆ ಸಿದ್ಧಲೋಕಕ್ಕೆ ಹೋಗಿ ಬರುವಳಂತೆ ಒಂದು ದಿನ ಕೆಲಸದವಳನ್ನೂ ಕರೆದುಕೊಂಡು ಹೋಗಿ ಸಿದ್ಧಲೋಕವನ್ನೆಲ್ಲ ಸುತ್ತಾಡಿಸಿ ಕೊಂಡು ಬಂದಳಂತೆ" ಎಂದು ತನ್ನ ಕಥೆಗೆ ಕೋಡು ಮೂಡಿಸಿದಳು.

"ಅತ್ತಿಮಬ್ಬೆಯ ಮಗು ಮುಂದೆ ರಾಜನಾಗುತ್ತಾನಂತೆ. ಈಗಿನಿಂದ ತನ್ನ ಸೇನೆಗೆ ಬೇಕಾದ ದಳವನ್ನು ನಿರ್ಮಿಸುತ್ತಿರುವನು. ಈದಿನ ಯಾವ ಯಾವ ಮಕ್ಕಳು ಅಲ್ಲಿಗೆ ಹೋಗಿದ್ದರೋ ಅವರೇ ಮುಂದಿನ ಮಂತ್ರಿಗಳು. ಸೇನಾಧಿಪತಿಗಳು, ಅಧಿಕಾರಿಗಳು,ಯಾವ ಕಾಲಕ್ಕೆ ಏನೋ ಎಂದು ನನ್ನ ಮಗುವಿನ ತಲೆಯನ್ನು ಆ ರಾಜಕುಮಾರನ ಪಾದಕ್ಕೆ ತಾಕಿಸಿದೆನಮ್ಮ !" ಎಂದು ಮಗದೊಬ್ಬಳು ಮಗನ ಭವಿಷ್ಯಕ್ಕೆ ಬಣ್ಣಕಟ್ಟಿ ದವಳಂತೆ ಬಣ್ಣಿಸಿದಳು.

"ಒಟ್ಟಿನಲ್ಲಿ ಹೇಳುವುದಾದರೆ, ಆ ಮುಗು ರಾಜನಾಗುವುದುಂತು ಖಂಡಿತ. ಆದಿನ ಜಾಗ್ರತೆ ಬರಲಿ. ಬಡವರ ಮಕ್ಕಳನ್ನೆಲ್ಲ ಈಗಾಲೆ ಕರೆಸೊಕೊಂಡ ಮಹಾರಾಯ ತಾನು ರಾಜನಾದಾಗ ಮರೆತಾನೆ ? ಇನ್ನು ವರ್ಷಾನುಗಟ್ಟಲೆ ನಾವು ಹಾಯಾಗಿರಬಹುದು. ಮುಂದಿನ ಹೆರಿಗೆಯಾಗುವ ತನಕ ನಮಗೆ ತಾಪತ್ರಯವಿರಲಾರದು. ಅವರೇ ಕೊಟ್ಟ ಹಸುವಿದೆ. ಬಟ್ಟೆ ಬರೆ ಇದೆ. ಕೈಯಲ್ಲಿ ಹಣವಿದೆ !"ಎಂದು ಮತ್ತೊಬ್ಬಳು ಕಲ್ಪವೃಕ್ಷದ ಅಡಿ ನಿಂತವಳಂತೆ ಹಿಗ್ಗಿದಳು.

"ಮುಂದಿನ ಹರಿಗೆ ಆಗುವ ತನಕ ಹಣ ಸಾಕಾದೀತೆ ?" ಎಂದು ಇನ್ನೊಬ್ಬಳು ಸಂದೇಹಗೊಂಡಳು.

" ಅಯ್ಯೋ ಬೆಪ್ಪೆ, ಹಣ ಮುಗಿಯುವ ತನಕ ತಿನ್ನು, ಅನಂತರ ಬಂಗಾರದ ಒಳ್ಳೆಯನ್ನು ಮಾರಿಬಿಡು. ಅದೂ ಮುಗಿದರೆ ಹಸುವನ್ನೂ ಮಾರಿದರಾಯಿತು. ಇವೆಲ್ಲ ಬಡವರಿಗೆ ಏತಕ್ಕೆ ?

ಎಲ್ಲಿಂದ ಬಂದವೋ ಮತ್ತೆ ಅಲ್ಲಿಗೇ ಹೋಗುವುವು ! ಇದು ಸೃಷ್ಟಿ ನಿಯಮ. ಅದರಿಂದಲೇ ನಾವೆಲ್ಲ ಬಡವರು, ಅವರು ಶ್ರೀಮಂತರು" ಎಂದು ಬಬ್ಬಾಕೆ ಬಡವರು ಭವಿಷ್ಯವನ್ನು ನುಡಿದಳು.

ಇತ್ತ ಅತ್ತಿಮಬ್ಬೆಯ ಮಗುವಿನ ಅಣ್ಣಿಗದೇವನೆಂದು ನಾಮಕರಣವಾಯಿತು. ಸುವಾಸಿನಿಯರು ತಂಡೋಪತಂಡವಾಗಿ ಬಂದು ಮುಗುವಿನ ಅಂದಚಂದವನ್ನು ಬಣ್ಣಿಸಿ, ಮುಟ್ಟಿ, ಮುತ್ತಿಟ್ಟು ಮುದ್ದಾಡಿದರು. ಮಗು ಮನುಷ್ಯ ಲೋಕದ ಸಡಗರವನ್ನು ಕಂಡು ಕೇಕೆ ಹಾಕಿ ನಕ್ಕಿತು. "ಛೀ ಕಳ್ಳ ಈಗಾಗಲೇ ನಗುತ್ತಿರುವೆ ? ಏನು ಕಂಡು ಕೇಕೆ ಹಾಕಿದೆ ?" ಎಂದು ಬಬ್ಬಳು ನಟಿಕ ತೆಗೆದಳು.

"ಜಿನಬಿಂಬ ಇದ್ದ ಹಾಗೆ ಇದೆ ತಾಯಿ. ಲೋಕಕ್ಕೆ ಬರುವಾಗಲೆ ಇಷ್ಟೊಂದು ಕಾರುಬಾರು ಮಾಡಿರುವನಲ್ಲ ! ಗರ್ಭಾವತರಣ ಮತ್ತು ಜನ್ಮಾಭಿಷೇಕಗಳನ್ನು ಪುರಾಣಗಳಲ್ಲಿ ಮಾತ್ರ ಕೇಳಿದ್ದೆ. ಈ ಚಿಣ್ಣ ಅಣ್ಣಿಗ ಪುರಾಣದ ಮಹಿಮೆಯನ್ನೆಲ್ಲ ನಮ್ಮ ಲೋಕಕ್ಕೂ ಎಳೆದು ತಂದನಲ್ಲ !" ಎಂದು ಇನ್ನೊಬ್ಬಳು ಅತ್ತಿಮಬ್ಬೆಗೆ ಹೇಳಿದಾಗ "ಎಲ್ಲ ನಿಮ್ಮ ಹಾರೈಕೆ " ಎಂದು ಆಕೆ ಮುಗುಳ್ನಕ್ಕಳು.

"ನೀನು ಬರುತ್ತಿದ್ದಂತೆ ಮನೆಯನ್ನು ದೂಪಿಟ್ಟೆ. ಮುಂದೆ ಏನು ಮಾಡುವೆ ಅಣ್ಣಿಗ ?" ಎಂದು ಇನ್ನೊಬ್ಬಳು ಮುತ್ತಿಟ್ಟು ಕೇಳಿದಾಗ ಮುಗು ಆಕೆಯ ಅವಲಕ್ಷಿ ಸರಕ್ಕೆ ಕೈಹಾಕಿ ಎಳೆಯಿತು. "ಅತ್ತಿಮಬ್ಬೆ, ನಿನ್ನ ಮಗನಿಗೆ ನನ್ನ ಅವಲಕ್ಕಿಸರ ಬೇಕಂತೆ. ಅಯ್ಯೊ ಪುಟ್ಟ, ಇದು ನಿಗೇತಕ್ಕೋ ?" ಎಂದು ಆಕೆ ಅವಲಕ್ಕಿ ಸರವನ್ನು ತೆಗೆದು ಮುಗುವಿಗೆ ಹಾಕಿಯೇ ಬಿಟ್ಟುಳು. ಅತ್ತಿಮಬ್ಬೆ ಬೇಡವೆಂದರೂ ಕೇಳದ ಅದನ್ನು ಉಡುಗೊರೆಯಾಗಿ ಕೊಟುಹೋದಳು.

"ನಿನ್ನ ಮಗನಿಗೆ ಕಳೆಯುವಿದೂ ಗೊತ್ತು, ಗಳಿಸುವುದೂ ಗೊತ್ತು" ಎಂದು ಇನ್ನೊಬ್ಬಳು ಅತ್ತಿಮಬ್ಬೆಯನ್ನು ವಿನೋದವಾಗಿ ನಗಿಸಿದಳು.

"ಮಾಟ ಎಲ್ಲ ತಾಯಂತೆ, ಬಣ್ಣಮಾತ್ರ ಅಪ್ಪನದು" ಎಂದು ಬಬ್ಬಳು ಮಗುವನ್ನು ಬಣ್ಣಿಸಿದಳು.

"ಮೂಗು ಅಜ್ಜಿಯದು" ಇನ್ನೊಬ್ಬಳು ಸರಿಪಡಿಸಿದಳು.

"ಕಾಲು ನೋಡಿ, ತಾತನದೆ !" ಇನ್ನೊಬ್ಬಳು ರಾಗ ಎಳೆದಳು.

“ ಪದ್ಮಜ್ಜಿ, ನಿನ್ನ ಮೊಮ್ಮಗ ಸಾಮಾನ್ಯನಲ್ಲಮ್ಮ, ಬಂದ ಹೆಣ್ಣು ಮಕ್ಕಳ ಕೊರಳಿಗೆ ಕೈಹಾಕುವನಲ್ಲ !” ಎಂದು ಬಬ್ಬಳು ಪದ್ಮಬ್ಬೆಯ ಗಮನ ಸೆಳೆದಳು.

“ಯಾರೇ ಅಜ್ಜಿ ನಿನಗೆ. ನನಗೇನು ಹಲ್ಲುದುರಿವೆಯೇ ? ಸೊಂಟ ಬಗ್ಗಿದೆಯೆ ? ಕಣ್ಣು ಮಂಜಾಗಿದೆಯೇ ?” ಎಂದು ಪದ್ಮಬ್ಬೆ ಕೋಪ ನಟಿಸಿದಳು.

“ನಿನ್ನ ಕೂಗಾಟ ಕಟ್ಟಿಡಜ್ಜಿ ! ಅಣ್ಣಿಗದೇವ ಹುಟ್ಟಿದಂದೇ ನಿನ್ನ ಪ್ರಾಯ ಮುಗಿಯಿತು” ಎಂದು ಮೊದಲಾಕೆ ದಬಾಯಿಸಿದಳು.

“ಅಲ್ಲವೇ ನನ್ನ ಮೊಮ್ಮಗನಿಗೆ ನಾನು ಅಜ್ಜಿಯಾದರೆ ಊರಿಗೆಲ್ಲ ಅಜ್ಜಿಯೇನೇ ?” ಎಂದು ಪದ್ಮಬ್ಬೆ ಸಿಡುಕಾದಳು.

“ನಿನ್ನ ಮೊಮ್ಮಗನನ್ನೇ ಕೇಳಿಬಿಡೋಣ” ಎಂದು ಆಕೆ ಮುಗುವನ್ನು  ಎತ್ತಿ ಕೊಳ್ಳಲು ಎತ್ತಿಕೊಳ್ಳಲು ಹೋದಾಗ ಅದು ಮೃದುವಾಗ ಒದೆಯಿತು. “ಅಯ್ಯೊ ಕಳ್ಳ, ಈಗಾಗಲೇ ಒದೆಯುವುದಕ್ಕೆ ಬರುತ್ತೀಯಲ್ಲ !” ಎಂದು ಆಕೆ ಬೆಚ್ಚಿದವಳಂತೆ ನಟಿಸಿದಳು.

“ನೋಡೆ, ನೀವೆಲ್ಲ ನನ್ನನು ಅಜ್ಜಿ ಎನ್ನುವುದು ನಮ್ಮ ಅಣ್ಣಿಗನಿಗೆ ಸರಿಹೋಗುವುದಿಲ್ಲ. ಅವನಿಗೊಬ್ಬನಿಗೆ ಮಾತ್ರ ನಾನು ಅಜ್ಜಿ ” ಎಂದು ಪದ್ಮಬ್ಬೆ ಮುಗುಳ್ನಕ್ಕು ಮಗುವನ್ನು ಮುದ್ದಾಡಿದಳು.

“ಸದ್ಯಕ್ಕೆ ಅವನೊಬ್ಬನಿಗೆ ಅಲ್ಲವೇ ಅಜ್ಜಿ” ಎಂದು ಇನ್ನೊಬ್ಬಳು ರೇಗಿಸಿದಳು.

“ ಗಯ್ಯಾಲಿ ಗಂಗಮ್ಮ ನಿನಗೆ ಏನು ಮಾಡಬೇಕು ಅಂತ !” ಎಂದು ಪದ್ಮಬ್ಬೆ ಅವಳನ್ನು ಹಿಡಿಯಲು ಹಾರಾಡಿದಳು.

ಮಗುವನ್ನು ಬಂದವರೆಲ್ಲ ತೂಗಿ ಆನಂದಪ್ಪಟ್ಟರು. ಅಣ್ಣಿಗದೇವನಿಗೆ ಬಂದ ಉಡುಗೊರೆ ರಾಶಿರಾಶಿಯಾಗಿ ಬೆಳೆಯಿತು. ಬಂಗಾರದ ಲೋಟಗಳು. ಬಂಗಾರದ ತಟ್ಟೆಗಳು. ಬಂಗಾರದ ಒಳ್ಳೆಗಳು ಬಂಡಿಬಂಡಿಯಾಗಿ ಬಿದ್ದವು. ದೇವರಿಗೆ ಹರಕೆ ಹೊತ್ತವರೆಲ್ಲ ಜಾತ್ರೆಯಲ್ಲಿ ಒಮ್ಮೆಗೇ ಬಂದು ಒಪ್ಪಿಸುವಂತೆ ಅಣ್ಣಿಗನಿಗೆ ಕಾಣಿಕೆಯ ಮಳೆಗರೆಯಿತು ! ಬಟ್ಟೆ ಬರೆಯಂತು ಊರಿನ ಮಕ್ಕಗಳಿಗೆಲ್ಲ ಹಂಚುವಷ್ಟು ಬಂದಿತು. ನೂರಾರು ಬಂಗಾರದ ತೊಟ್ಟಿಲುಗಳನ್ನು ಶ್ರೀಮಂತರು

ತಂದು ಓದಿಸಿದರು. ರಾಜ ಮಹಾರಾಜರೂ ಅವರವರ ಘನತೆಗೆ ಅನುಗುಣವಾಗಿ ಉಡುಗೊರೆ ಕಳಿಸಿದರು.

ಬಾನಂತಿಗೆ ಆಯಾಸವಾದೀತೆಂದು ಆಕೆಯನ್ನು ವಿಶ್ರಮಿಸಲು ಕಳುಹಿಸಿ ಆ ಜಾಗದಲ್ಲಿ ಗುಂಡುಮಬ್ಬೆ ಬಂದು ಕುಳಿತಳು. ಬಹುಮಟ್ಟಿಗೆ ಬಂದವರೆಲ್ಲ ಈಕೆಯೇ ಅತ್ತಿಮಬ್ಬೆಯೆಂದುಕೊಂಡು ಮೋಸ ಹೋದರು !

ಜಿನಾಲದಲ್ಲಿ ವಿಶೇಷ ಪೂಜೋತ್ಸವಳಾದವು . ಮಗು ಹುಟ್ಟಿದಂದಿನಿಂದ ಜಿನಮೂರ್ತಿಗಳ ಪಂಚಕಲ್ಯಾಣವಾಗಿ ಪ್ರತಿಷ್ಠಾನೆಯಾಯಿತು. ಹತ್ತಾರು ದೇಗುಲಗಳಿಗೆ ಅಣ್ಣಿಗದೇವನ ತೂಕಕ್ಕೆ ಸಮನಾಗಿ ಬಂಗಾರದ ತುಲಾಭಾರ ಮಾಡಿಸಿದರು. ಏನೇನು ಮಾಡಿದರೂ ಇವರ ಸಂಪತ್ತು ಸವೆಯದು. ಹತ್ತು ತೆಗೆದಾಗ ಇಪ್ಪತ್ತು ಬಂದು ಅಲ್ಲೇ ಬಿದ್ದರೆ ಬಡತನ ಬಂದೀತೆ ? ಅಣ್ಣಿಗದೇವ ಹುಟ್ಟುತ್ತಿದ್ದಂತೆ ಲಕ್ಷಾಂತರ ಹೂನ್ನನ್ನು ದಲ್ಲಪ ನೀರಿನಂತೆ ವ್ಯಯಮಾಡಿದನು. ಆದರೆ ಮಗುವಿನ ನಾಮಕರಣದಂದು ಉಡುಗೊರೆ ರೂಪದಲ್ಲಿ ಒಂದಕ್ಕೆ ಎರಡಾಗಿ ಹೊನ್ನಿನ ಹೊಳೆ ಹರಿದು ಬಂದಿತು. ಮಹಾಸಾಗರ ಎಷ್ಟು ಉದಾರಿಯಾದರೇನು ?ಮೇಘಮಾಲೆಯ ರೂಪದಲ್ಲಿಅದು ಎಷ್ಟು ನೀರನ್ನು ಹೊರಚೆಲ್ಲುವುದು? ಲೋಕ ತಣಿಯಲೆಂದು ಮೇಘಮಾಲೆ ಮಳೆಯಾಗಿ ಮನೆಮನೆಯ ಮುಂದೆಯೂ ಇಳಿದು ಸಾಗರದ ಸಂದೇಶವನ್ನು ಸಾರುವುದು, ಬಿದ್ದ ಮಳೆ ನೀರೆಲ್ಲ ಕೆಲವು ದಿನ ಅಲ್ಲಿ ಇಲ್ಲಿ ಅಡ್ಡಾಡಿ ಕೊನೆಗೆ ತಾನು ಹೊರಟ ತೌರುಮನೆಗೇನೆ ಬಂದು ಬೀಳುವುದು !ಅತ್ತಿಮಬೆ ಔದಾರ್ಯದ ಖನಿ ! ಆಕೆಯ ಯೋಗ ರಾಜಯೋಗ. ಎಲ್ಲಿ ಲೋಭವಿಲ್ಲವೋ ಅಲ್ಲೇ ಸಂಪದದ ಆವಾಸ !

ಮನದೊಳ್ ತಾಳ್ದುವಳೀಸತಿ
ಜಿನನಂ ಜಿನಜನನಿ ಗರ್ಭದೊಳ್ ತಾಳ್ದುವಳೆಂ ॥
ಬನಿತ ವಿಕಲ್ಪಂ ತೈಲನ
ಜನನಿಗೆ ಜಿನಜನನಿಗೇಂ ವಿಕ ಲ್ಪಮುಂಟೇ ॥